# HAVYAKA SANDESHA

## ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

॥धर्मो रक्षति रक्षितः॥

Vol. XX, No. 3 | June 2012 | Pages 12 | **Rs. 2/-**





Editorial 2

President's Message 3

ಚಿಂತನ-ಚಿಲುಮೆ 5
ಪ್ರೊ. ಪಿ. ಎಂ. ಹೆಗಡೆ, ಶಿರಸಿ

ಸಂಮಾನ ಸಂಸ್ಮರಣೆ ಯಕ್ಷಗಾನ ಪ್ರದರ್ಶನ 6
ವರದಿ : ಸುಬ್ರಹ್ಮಣ್ಯ ಭಟ್, ನಿಟ್ಟೂರು

ಭಾಸ ಬೋಧ 7
ಪ್ರೊ। ವಿಷ್ಣು ಜೋಶಿ, ಕುಮಟಾ

ಮೋಹನದಾಸ ಕರಮಚಂದ ಗಾಂಧೀಜಿಯವರ ಸಂಕ್ಷಿಪ್ತ ಆತ್ಮಕಥನ 8
ಶ್ರೀಮತಿ ಎಚ್. ಎಲ್. ಸೀತಾದೇವಿ, ಮೈಸೂರು

Letters to the Editor 9

Sanitation & the Health Scenario 11
The Reason for Poor Health is an Obvious Stink
Dr. Ishaprasad Bhagwat



*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (Dec. 2011)*

**"Havyaka Sandesha"** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat

***Hon.Joint Editor*** : G. V. Bhagwat

***Editorial Committee*** { R. P. Hegde
R. M. Shastri
Smt. Shashikala Hegde
Smt. Tanuja Hegde

***Publisher*** : Narayan Akadas R.
**Hon. Gen. Secretary**

***Printed at*** : M/s. Navin Printers
**Mumbai - 400 016.**
**✆ 2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2011-2012**

***President*** : N. R. Hegde, Dombivli
***Vice - President*** : Shivkumar P. Bhagwat
***Hon. Gen. Secretary*** : Narayan Akadas
***Hon. Jt. Secretary*** : R. M. Shastri, Dombivli
***Hon. Treasurer*** : A. G. Bhat

***Elected Members :***

Smt. Tanuja Hegde — R. P. Hegde
Smt. Shashikala Hegde — R.N.Kameshwar
A. K. Bhat — Smt. Uma Swamy
M. G. Ramakrishna — Sanjay Bhat
Ramesh Vaidya

***Co-opted Members :***
G. V. Bhagwat

***ಸಂಪಾದಕೀಯ***

# ಸ್ವರಕ್ಷಣೆ

ಮುಂಜಾವಿನಲ್ಲಿ ಸೂರ್ಯ ಆಕಳಿಸುತ್ತ ಕಟ್ಟಡಗಳ ನಡುವಿಂದ ಇಣುಕಿ ನೋಡುತಿದ್ದಾನೆ. ಕಾಗೆಗಳ ಕಾಕಾಗಳ ನಡುವೆಯೂ ಹಕ್ಕಿಗಳ ಚಿಲಿಪಿಲಿ ಇಂಚರ. ಬಾಲ್ಕನಿಯಿಂದ ಬಾಗಿ ಕೆಳಗೆ ನೋಡಿದಾಗ ಮೂರು ನಾಲ್ಕು ಗುಬ್ಬಚ್ಚಿಗಳು ಕಂಪೌಂಡಿನಲ್ಲಿ ಆಟವಾಡುವ ಸುಂದರವಾದ ದೃಶ್ಯ ಕಣ್ತುಂಬಿತು.

ಎಷ್ಟೊ ದಿನಗಳೇ ಕಳೆದು ಹೋಗಿದ್ದವು. ಆ ಪುಟಾಣಿ ಜೀವಿಗಳು ತಮ್ಮ ಹಗುರವಾದ ಗರಿಗಳನ್ನು ಫಡಪಡಿಸುತ್ತ ಬಾಲ್ಕನಿಯಲ್ಲಿ ಇಳಿದು ತಮ್ಮಿರುವನ್ನು ತೋರಿಸಿಕೊಳ್ಳದೆ. ಮೊಬೈಲ್ ಟಾವರ್‌ಗಳ ವಿದ್ಯುತ್ ಆಯಸ್ಕಾಂತ ಅಲೆಗಳ ಆಘಾತಕ್ಕೆ ತುತ್ತಾಗಿ ಅವುಗಳ ಸಂತತಿಯೇ ನಾಶವಾಗಿದೆ ಎನ್ನುವ ವಿಷಯ ಕೇಳಿ ಬಂದು ಹಲವಾರು ವರ್ಷಗಳು ಕಳೆದು ಹೋದ ಮೇಲೆ ಪುನಃ ಅವುಗಳ ಸಂತತಿ ಚಿಗುರಿದೆ.

ಈ ಪ್ರಕೃತಿಯೇ ಹೀಗಲ್ಲವೇ? It has the force to bounce back. ಯಾವ ಆಘಾತಕ್ಕೆ ತತ್ತರಿಸಿ ಒಮ್ಮೆ ಬಾಡಿದರೂ ಪುನಃ ಚೇತರಿಸಿಕೊಳ್ಳುತ್ತಿದೆ. ಪ್ರಕೃತಿಯ ಅಂಗವಾಗಿರುವ ನಮಗೂ ಕೂಡ ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲಾದರೂ ಉಸಿರನ್ನು ಹಿಡಿದುಕೊಂಡು ಮತ್ತೆ ಜೀವನದ ಯಾತ್ರೆಯನ್ನು ಮುಂದುವರಿಸಿಕೊಂಡು ಹೋಗುವಂತಹ ಚಾಕಚಕ್ಯತೆ ಪ್ರಕೃತಿದತ್ತವಾಗಿಯೇ ಬಂದುಬಿಟ್ಟಿರುತ್ತದೆ.

ದೊಡ್ಡ ದೊಡ್ಡ mallಗಳು ಮಾರುಕಟ್ಟೆಗೆ ಹೆಜ್ಜೆಯಿಟ್ಟಾಗ ''ಇನ್ನೂ ಚಿಕ್ಕಪುಟ್ಟ ಅಂಗಡಿಗಳು ಏನು ಮಾಡಿಯಾವು? ಈ ಭಾಜಿವಾಲಾ ಭಯ್ಯಾರವರ ಗತಿಯೇನು?'' ಎಂದು ನಾವು ಕಳವಳಗೊಳ್ಳುತ್ತಿರುವಾಗಲೇ ಅವರು ಚೇತರಿಸಿಕೊಳ್ಳುವ ಮಾರ್ಗವನ್ನು ಹುಡುಕಿಕೊಂಡಾಯ್ತು. ಹೊಸ strategyಗಳನ್ನೂ ಸಿದ್ಧಗೊಳಿಸಿಕೊಂಡಾಯ್ತು. ತರಕಾರಿ ಮಾರುವ ಭಯ್ಯಾ ಕೂಡ ಕೈಯಲ್ಲಿ ಮೊಬೈಲ್ ಹಿಡಿದುಕೊಂಡು 'ಭಾಭಿ... ನಿಮಗೆ ಯಾವಾಗ ಬೇಕು ಹೇಳಿ, ಮನೆಗೆ ಕಾಯಿಪಲ್ಲೆ ಹಾಜಿರ್' ಎಂದು ಆಶ್ವಾಸನೆ ಕೊಡುತ್ತಾನೆ. ಕಿರಾಣಿ ಅಂಗಡಿಯವನೂ ಕೂಡ ತನ್ನ ಋಜುತ್ವವನ್ನು ಸಾಬೀತು ಪಡಿಸುವಂತೆ ಉತ್ತಮವಾದ ಸರಕನ್ನೇ ಅಂಗಡಿಯಲ್ಲಿ ತುಂಬಿಸಿಕೊಳ್ಳುತ್ತಿದ್ದಾನೆ. 'Professionalism' ಈಗ ಅವರಲ್ಲೂ ಮನೆಮಾಡಿಕೊಂಡಿದೆ.

ಪ್ರಕೃತಿಯಂತೆ ಸಂಸ್ಕೃತಿಯೂ ಕೂಡ ತನ್ನ ಗತಿಯನ್ನು ಕಾಪಾಡಿಕೊಳ್ಳಬಹುದು. ನಮ್ಮ ಹಿಂದೂ ಧರ್ಮವೂ ಕೂಡಾ ಈ ನೆಲದ ಮೇಲೆಯೇ ಬೆಳೆದು ಬಂದಂತಹ ಇತರ ಧರ್ಮಗಳ ಪ್ರಭಾವದಿಂದ ಶಿಥಿಲಾವಸ್ಥೆಯನ್ನು ತಲುಪಿದಂತಹ ಕಾಲವೂ ಇತ್ತು. 'ಶಂಕರಾಚಾರ್ಯ'ರವರ ದಾರ್ಶನಿಕರ ಪ್ರಭೆಯಿಂದ, ದೇಶದ ಉದ್ದಗಲದಲ್ಲೆಲ್ಲ ತಿರುಗಿದಂತಹ ಅವರ ಪ್ರಯತ್ನದ ಪ್ರಭಾವದಿಂದ ಪುನಃ ತನ್ನ ಅಸ್ತಿತ್ವವನ್ನು ಮೆರೆಯಿತು. ಇಡಿ ಜಗತ್ತೇ ಒಂದು ಹಳ್ಳಿಯಂತೆ ಕೂಡಿಕೊಂಡು ಮುಂದೆ ಹೋಗುವ ಪ್ರಕ್ರಿಯೆ ಸುಂದರವೆನಿಸಿದರೂ, ಈ ನಾಗಾಲೋಟದಲ್ಲಿ ಭಾಗಿಯಾಗುತ್ತಲೇ ನಮ್ಮ ಸಂಸ್ಕೃತಿ ಹಾಗೂ ಕಲೆಯನ್ನು ಉಳಿಸಿಕೊಳ್ಳುವುದು ಕೂಡ ನಮ್ಮ ಹೊಣೆಗಾರಿಕೆಯಾಗಿದೆ. ವಿಶ್ವದ ಎಲ್ಲಾ ಭಾಗಗಳ ನೇರವಾದ ಪ್ರಭಾವ ನಮ್ಮ ಮೇಲಾಗುತ್ತಿರುವ ಈ ಸಂದರ್ಭದಲ್ಲಿ ನಮ್ಮ ನಿಮ್ಮೆಲ್ಲರಿನ ಚಿಕ್ಕ ಪುಟ್ಟ ಪ್ರಯತ್ನಗಳ ಮೂಲಕ ಸತತವಾಗಿ ನಮ್ಮ ಸಂಸ್ಕೃತಿಯ ಬೇರುಗಳಿಗೆ ನೀರು ಹಾಕೋಣ. ಸದ್ವಿಚಾರ ಆಚಾರಗಳ ಗೊಬ್ಬರವ ಸುರಿಯೋಣ.

Capitalism ಯುಗದಲ್ಲಿ ಸಂಪತ್ತು ಕೆಲವರಲ್ಲಿಯೇ ಶೇಖರವಾದಂತೆ ಇಂದಿನ ಕಲಾಜಗತ್ತಿನಲ್ಲಿಯೂ ಕೂಡಾ ನಾವು ಪ್ರತಿಭೆಯು ಕೆಲವೇ superstarಗಳಲ್ಲಿ ಕೇಂದ್ರೀಕೃತವಾಗಿದೆ ಎನ್ನುವಂತೆ ನಡೆದುಕೊಳ್ಳುತ್ತೇವೆ. ಸೂಪರ್‌ಸ್ಟಾರ್‌ಗಳ blogಗಳಲ್ಲಿ ಕಣ್ಣು ಹೊರಳಿಸುವಾಗ ನಮ್ಮ ಸುತ್ತ ಮುತ್ತಲಿನ ಪ್ರತಿಭೆಗಳನ್ನೇ ನಾವು ಗುರುತಿಸಲು ಮರೆಯುತ್ತೇವೆ. ಇಂದು 24 ಗಂಟೆಯೂ ಥಳಥಳಗುಡುವ ಟಿ.ವಿ.ಯ ಪ್ರಭಾವಳಿಯಲ್ಲಿ ಹಿಂದೊಮ್ಮೆ ತಮ್ಮ ಜೀವಂತಿಕೆಯಿಂದ, ಲವಲವಿಕೆಯಿಂದ ಪ್ರೇಕ್ಷಕರನ್ನು ಸೆಳೆಯುತ್ತಿರುವ ನಾಟಕಗಳು ಹಿನ್ನೆಡೆದಿವೆ. ನಮ್ಮ ಸಂಸ್ಕೃತಿಯ ಅಂಗವಾದಂತಹ ಯಕ್ಷಗಾನ ಮತ್ತು ಇನ್ನಿತರ ಕಲೆಗಳನ್ನು ಉಳಿಸಿ ಬೆಳೆಸಲು ಕೂಡ ನಾವು ಪ್ರಯತ್ನಪಡಬೇಕು. ನಮ್ಮ ಸಂಸ್ಥೆಯ ಸದಸ್ಯರಾದ ಯುವಕ ಸತೀಶ್ ಕುಮಾರ್ ಕೆ. ಸಿ. ಯವರು ತಮ್ಮ ತಾಂತ್ರಿಕ ಕ್ಷೇತ್ರದಲ್ಲಿ busy ಆಗಿದ್ದರೂ ಕೂಡ 'ಯಕ್ಷಗಾನವನ್ನು ಬೆಳೆಸುವದರ ಬಗ್ಗೆ ವಿಶೇಷ ಆಸ್ಥೆವಹಿಸಿ, ಶ್ರಮಿಸುವುದು ಶ್ಲಾಘನೀಯ. ನಮ್ಮ ಸಂಸ್ಥೆಯ ಯುವ ಜನಾಂಗಕ್ಕೆ ಇದು ಪ್ರೇರಣೆಯಾಗಲಿ ಎಂದು ಆಶಿಸೋಣವೇ?

ಬದಲಾವಣೆಗೆ ತೆರೆದುಕೊಳ್ಳೋಣ. ಅವು ಹಸಿರು ಚಿಗುರುಗಳಾಗಿ ಬದುಕು ನಳನಳಿಸುವಂತೆ ಮಾಡಲಿ. ನಮ್ಮ ಸಂಸ್ಕೃತಿ ಹಾಗೂ ಕಲೆಗಳು ಆಳಕ್ಕಿಳಿದ ಬೇರುಗಳಾಗಿ ಭದ್ರತೆಯನ್ನು ನೀಡಲಿ.

Amita S Bhagwat

e-mail : amitabhagwat@gmail.com

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2011)***

# PRESIDENT'S MESSAGE

Dear Friends,

We are happy to inform you that the final deal on the Dombivili plot is completed. We have received post dated cheques (the last one is dated 7th July 2012). While writing this message the first cheque is already credited. The original documents pertaining to the deal such as cancellation deed etc. is kept in escrow with Advocate Shri G.S.Bhat which will be released on the last cheque getting credited in the account.

Friends, now that we have some money in the account we have to vigorously pursue with our project of building HAVYAKARA BHAVANA & OLD AGE HOME. We should now be more cautious and procure the property having a clear title. Although it is a setback to us, we should not give up hopes and be patient and not take hasty steps. It may take some time for finding a suitable property.

We can keep the money in fixed deposit till such time we get a suitable property. The interest earned there form can be utilized for welfare activities. We can also think of tying up with some hospital. We hope to get innovative ideas from you.

One of our members has suggested of a hall which is in a newly constructed building, located about 7 kms. from Thane railway station. Some of us have visited the place. We do not have sufficient funds to buy the place. There is a suggestion that we appeal to the members for collecting about Rs. 2 crores which will enable us to buy it. The MHADA property seen at Santacruz (E) cannot be transferred in the name of the Trust. If the members have any query or require any information we request you to contact us directly. Any decision on the purchase of the property will be done in consultation with the core committee.

We are happy to inform you that some well known writers are planning to collect the writings of Late Shri Karki Venkatramana Shastri Suri and publish the same. They have approached us to sponsor. We are seeking the details and the decision will be taken after thorough discussions.

In the recent past we have found that our community needs lot of medical help especially in major illness. We have come across many NGOs who have the provision to help for major illness such as Heart surgery, Cancer treatment etc. If any body needs such help they can approach us so that we will guide them to approach the concerned NGOs.

With Warm Regards

**N. R. HEGDE**
*President*

*PAGE DONATED BY : **SMT. SHANTA V. HEGDE,** CARMICHAEL ROAD (DEC.-2012)*

NKE Society's

# Sir M Visvesvaraya Institute of Management Studies & Research




AICTE Approved
DTE Code : MB 3419

## Admissions Open

**Seeking Applications for**
**MMS 2012-14 Batch**

**Kannada Minority students**
**(Kannada, Konkani, Tulu, Kodava)**

Scholarships For Meritorious students

Students who have not appeared for MH-CET, can appear for ATMA Exam on 10th June & AMMI Exams due around June end'12

GD/ PI to be conducted at our Campus

**Partnerships with NSE & E4 Learning**

**Our Vision: Creating Leaders for the new Millennium**

## Masters in Management Studies (MMS)

Affiliated to University of Mumbai

*SVIMS Instructive methods uses Holistic Approach and Simulated class room Environment, Role plays and Workshops to enhance applications of concepts*

- Intellectual Capital—Senior Guest and Core faculty with Industrial experience
- Assessment Center > Evaluation done to assess students innate strengths
- Workshops conducted on Analytics like Advanced Excel, pivot tables, design training modules etc. help create entry level employability skills.
- Placement Cell includes Career Counseling, preparation for skills and interviews
- E-Learning resources - AC Classrooms, Wi-Fi Campus, Research databases etc
- Seminars on Macro and micro economic aspects of business & strategic issues

Visit website :www.svims.com

Register Online:- Fill Application Form and email to - info@svims.edu.in

Email your queries to: svims3@gmail.com

Call Minal on 022– 24180560/61/63 to schedule your Campus Visit on all days, including Sundays and meet with our core faculty

Campus Address:-
Road No 7A, Sewri-wadala Estate,
Near VJTI & UIT,
Besides Indulal Bhuva Park,
Wadala (W), Mumbai - 31








PAGE DONATED BY : **SHRI BALCHANDRA MARKANDE, DOMBIVLI**

# ಭಗವನ್ನಾಮ ಸ್ಮರಣೆಯ ಮಹತ್ವಗಳು

01. ಪ್ರಾರಬ್ಧ ಕರ್ಮಗಳ ತೀವ್ರತೆಯನ್ನು ಕಡಿಮೆಮಾಡುತ್ತದೆ.

02. ಪ್ರಾರಬ್ಧ ಕರ್ಮಗಳನ್ನು ಭೋಗಿಸುವ ಕ್ಷಮತೆಯನ್ನು ಹೆಚ್ಚಿಸುತ್ತದೆ.

03. ಸಾಂಸಾರಿಕ ಅಡಚಣೆಗಳನ್ನು ಕಡಿಮೆಮಾಡುತ್ತದೆ.

04. ಪರಿಸ್ಥಿತಿಗೆ ಹೊಂದಿಕೊಳ್ಳುವ ಕ್ಷಮತೆ ಹೆಚ್ಚುತ್ತದೆ.

05. ಜೀವನದಲ್ಲಿ ಸಮಾಧಾನ ಸಿಗುತ್ತದೆ.

06. ವಾಸ್ತು ಶುದ್ಧಿಯಾಗುತ್ತದೆ.

07. ಮನೆಯಲ್ಲಿ ಸಾತ್ವಿಕತೆ ಹೆಚ್ಚುತ್ತದೆ.

08. ಮನೆಯಲ್ಲಿ ಶಾಂತಿ ನೆಲೆಸುತ್ತದೆ.

09. ಪ್ರೇಮ ಭಾವ ನಿರ್ಮಾಣವಾಗುತ್ತದೆ.

10. ಮನೆಯಲ್ಲಿ ಭಗವಂತನ ವಾಸವಾಗುತ್ತದೆ.

11. ಸಂಕಟ ಎದುರಿಸುವ ಶಕ್ತಿ ಹೆಚ್ಚುತ್ತದೆ.

12. ಭಯ ಭೀತಿ ನಿವಾರಣೆಯಾಗುತ್ತದೆ.

13. ಸ್ವಭಾವದಲ್ಲಿ ಬದಲಾವಣೆಯಾಗುತ್ತದೆ.

14. ಆಸೆ, ಆಕಾಂಕ್ಷೆಗಳು ಕಡಿಮೆಯಾಗುತ್ತವೆ.

15. ಭಗವಂತನ ಸಾಮಿಪ್ಯ ಲಭಿಸುತ್ತದೆ.

ಸಂಗ್ರಹ : ತನುಜಾ ಹೆಗಡೆ


**SUVITEK INTERNATIONAL**

**Authorised Dealers for :**
**ARMSTRONG, INTERARCH, CRIL**

- PRE-ENGINEERED BUILDINGS
- ROOFINGS
- WALL CLADDINGS
- THERMAL INSULATIONS
- FALSE CEILINGS
- FALSE FLOORINGS
- BLINDS
- SIGNAGES

5/98, Jayvijay Society, Sahar Road,
Mumbai-400 099 India
Tel. : 2834 2952 ● Fax : 2824 8794
E-mail : suvitek@gmail.com

ADVT.




## ಚಿಂತನ – ಚಿಲುಮೆ

(ಜನವರಿ 2002ರಿಂದ ಚಿಮ್ಮುತ್ತಿರುವ ಚಿಲುಮೆ)

**ಪ್ರೊ। ಪಿ. ಎಂ. ಹೆಗಡೆ, ಶಿರಸಿ**

### ಚೌಕಾಶಿ ವ್ಯವಹಾರ

ಧಾರವಾಡದಲ್ಲಿರುವ ನನ್ನ ಮಿತ್ರನೋರ್ವನ ಮನೆಗೆ ಹೋದಾಗ ನನ್ನ ಮಿತ್ರನಾಗಲಿ ಅಥವಾ ಅವನ ಪತ್ನಿಯಾಗಲಿ ಮನೆಯಲ್ಲಿರಲಿಲ್ಲ. ಅವರ ಹದಿನೈದು ಹದಿನಾರು ವರ್ಷ ವಯಸ್ಸಿನ ಮಗನಿದ್ದ. ನಾನು ಕುಳಿತು ಸ್ವಲ್ಪ ವಿಶ್ರಾಂತಿ ಪಡೆದನಂತರ, ನಿಮ್ಮನ್ನು ಇಲ್ಲಿಯೇ ಪಕ್ಕದಲ್ಲಿರುವ ಹೊಟೇಲಿಗೆ ಕರೆದುಕೊಂಡು ಹೋಗಿ ತಿಂಡಿ ತೀರ್ಥಗಳನ್ನು ಕೊಡಿಸಿ, ನೀನೂ ತಿಂದು ಬಾ ಎಂದು ಅಪ್ಪ ಹೇಳಿದ್ದಾನೆ ಎಂದು ನನ್ನನ್ನು ಚಿಕ್ಕ ಹೋಟೆಲೊಂದಕ್ಕೆ ಕರೆದೊಯ್ದ. ನಾವು ನಮ್ಮ ಆಸನದಲ್ಲಿ ಕುಳಿತೊಡನೆ ಸಪ್ಲಯರ್ ಬಂದ. ಅವನು ಒಂದೇ ಉಸುರಿನಲ್ಲಿ ಹೇಳಿದ ತಿಂಡಿಗಳ ಪಟ್ಟಿಯನ್ನು ಕೇಳಿದ ನಂತರ, ನನ್ನ ಮಿತ್ರನ ಮಗ ಪ್ರತಿಯೊಂದು ತಿಂಡಿಯ ದರ ವಿಚಾರಿಸತೊಡಗಿದ. ಅಲ್ಲದೆ ಮತ್ತೊಂದು ಹೋಟೆಲಿನಲ್ಲಿ ಹತ್ತು ರೂಪಾಯಿಗೆ ಒಂದು ದೋಸೆಗಾದರೆ, ನಿಮ್ಮಲ್ಲಿ ಹನ್ನೊಂದು ರೂಪಾಯಿ ಏಕೆ? ಅಲ್ಲಿ ಉಪ್ಪಿಟ್ಟಿಗೆ ಐದು ರೂಪಾಯಿ, ನಿಮ್ಮಲ್ಲಿ ಆರು ರೂಪಾಯಿಯೇಕೆ? ಎಂದೆಲ್ಲ ಅವನೊಡನೆ ವಾದ ಮಾಡತೊಡಗಿದ. ಉಳಿದ ಹೋಟೆಲಿನವರಂತೆ 'ನೀವು ಬೇಕಾದರೆ ತಿನ್ನಿ ಇಲ್ಲವೇ ಬೇರೆ ಕಡೆ ಹೋಗಿ ಎಂದು ಹೇಳದೆ ಮಾಲೀಕನೇ ಬಂದು 'ಮತ್ತೊಂದು ಹೊಟೇಲಿನಲ್ಲಿ ವಿಧಿಸುವಷ್ಟನ್ನೇ ರೊಕ್ಕ ಕೊಡಪ್ಪ' ಎಂದು ಹೇಳಿ ಹೋದ ನಂತರ ದೋಸೆ ತಿಂದು ಚಹ ಕುಡಿದು ಬಿಲ್ ಕೊಟ್ಟು ಹೊರಬರುವಾಗ ಹುಡುಗ ಹೇಳಿದ ''ಅಂತೂ ನಾಲ್ಕು ರೂಪಾಯಿ ಉಳಿಸಿದಂತಾಯಿತು.'' ''ಹೋಟೆಲಿನಲ್ಲಿ ಯಾರೂ ದರದ ಬಗ್ಗೆ ವಾದ ಮಾಡುವದಿಲ್ಲ. ನೀನೇಕೆ ಮಾಡಿದೆ''ಎಂದು ನಾನು ಕೇಳಿದ್ದಕ್ಕೆ ''ಅಂಗಡಿಯವರು ಮೋಸ ಮಾಡುತ್ತಾರೆ; ಚೌಕಾಶಿಯಿಲ್ಲದೆ ವ್ಯವಹಾರ ಮಾಡಬಾರದೆಂದು ಅವ್ವ ಹೇಳಿದ್ದಾಳೆ'' ಎಂದ.

ಈ ಚೌಕಾಶಿ ವ್ಯವಹಾರ ಹೆಣ್ಣು ಮಕ್ಕಳಿಗೆ ಮೈಗೂಡಿಹೋಗಿದೆ. ನನ್ನ ಪತ್ನಿ ತರಕಾರಿ ತರಲು ಪ್ರತಿ ಸಂತೆಯ ದಿನ ತಾನೇ ಹೋಗುತ್ತಾಳೆ. ಒಮ್ಮೆ ಒಂದು ಸುತ್ತು ಹೋಗಿ ಪ್ರತಿಯೊಂದು ತರಕಾರಿಯ ದರ ಕೇಳುತ್ತಾಳೆ. ಎರಡನೇಯ ಸುತ್ತು ಒಳ್ಳೇ ಕಾಯಿ ಪಲ್ಯೆಗಳನ್ನು ನೋಡುವುದು, ಮೂರನೆಯ ಸುತ್ತು ಚೌಕಾಶಿ ಮಾಡಿ ದರವನ್ನು ಫಿಕ್ಸ್ ಮಾಡುವದು ಹಾಗೂ ಅಂತಿಮ ಸುತ್ತಿನಲ್ಲಿ ವ್ಯಾಪಾರಿಯು ತೂಗುವ ತಕ್ಕಡಿಯ ಬೇಲೆ ಪತ್ತೇದಾರಿ ಕಣ್ಣಿಟ್ಟು ಸರಿಯಾಗಿ ತೂಗಿಸಿ, ಚೀಲದಲ್ಲಿ ಹಾಕಿಕೊಂಡು, ತನ್ನ ಸ್ನೇಹಿತೆಯರೊಡನೆ ಕಾಯಿಪಲ್ಲೆ ದರಗಳ ಬಗ್ಗೆ ಚರ್ಚಿಸುತ್ತ ಮನೆಗೆ ಬರುತ್ತಾಳೆ. ಇಷ್ಟೆಲ್ಲ ವ್ಯವಹಾರಕ್ಕೆ ನಮಗೆ ಹದಿನೈದು ಇಪ್ಪತ್ತು ನಿಮಿಷಗಳು ಸಾಕಾದರೆ ಅವಳಿಗೆ ಕನಿಷ್ಠ ಅರುವತ್ತು ಎಪ್ಪತ್ತು ನಿಮಿಷಗಳಾದರೂ ಬೇಕು.

ಬಸ್ಸಿನ ದರ ಹೆಚ್ಚಾದ ಮೇಲೆ ರಾತ್ರಿ ಬಸ್ಸಿನಲ್ಲಿ ಪ್ರವಾಸ ಮಾಡುತ್ತಿದ್ದ ನನಗೆ ಕಂಡಕ್ಟರ್ ಹಾಗೂ ಪ್ರಯಾಣಿಕನೋರ್ವನ ನಡುವೆ ಬಿಸಿ ಬಿಸಿಯಾದ ವಾಗ್ವಾದ ನಡೆಯುತ್ತಿತ್ತು. ಪ್ರಯಾಣಿಕ ಹಿಂದಿನ ದಿನ ಪ್ರಯಾಣ ಮಾಡುವಾಗ ಕಂಡಕ್ಟರನಿಗೆ ಹತ್ತು ರೂಪಾಯಿಕೊಟ್ಟಿದ್ದ. ಇಂದು ಹನ್ನೆರಡು ರೂಪಾಯಿ ಕೇಳುತ್ತಿದ್ದಾನೆ. ಅದು ಹೆಚ್ಚಾಯಿತೆಂದು ಪ್ರಯಾಣಿಕನ ವಾದ. ಅಂತೂ ಪ್ರಯಾಣಿಕ ಹನ್ನೊಂದು ರೂಪಾಯಿಕೊಟ್ಟು ಕಿರೀಟ ಬಿದ್ದವನಂತೆ ಕುಳಿತ. ಟಿಕೆಟಿನ ಮುಖ ಬೆಲೆ ಹದಿನೆಂಟು ರೂಪಾಯಿ. ಪ್ರಯಾಣಿಕನಿಗೆ ಟಿಕೇಟನ್ನು ಕೇಳಿ ಪಡೆಯುವ ಪ್ರಮೇಯವೇ ಇರಲಿಲ್ಲ. ಈ ಚೌಕಾಶಿಯಲ್ಲಿ ಇಬ್ಬರಿಗೂ ಲಾಭವಾಯಿತು. ಹಾನಿ ಯಾರಿಗೆ?

*PAGE DONATED BY :* ***ADVOCATE M.S. PANDIT, PUNE***

# ಶ್ರೀ ಸತೀಷಕುಮಾರ್ ಕೆ.ಸಿ.ಯವರ ನೇತ್ರತ್ವದಲ್ಲಿ ಸಂಮಾನ, ಸಂಸ್ಮರಣೆ, ಯಕ್ಷಗಾನ ಪ್ರದರ್ಶನ



ಇತ್ತೀಚೆಗೆ ಹೆಬ್ಬಿಗೆ ಶ್ರೀಮತಿ ಶರಾವತಿ ವಾಸುದೇವಯ್ಯನವರ ನವಾಗಾರ ಪ್ರದೇಶದ ದಿನ 25-04-2012ರ ಬುಧವಾರ ಮಹಾ ಅನ್ನಸಂತರ್ಪಣೆ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಎರಡನೆಯ ವರ್ಷದ ಅರಳಿಕಟ್ಟೆ ಭಾಸ್ಕರ್ ರಾವ್ ಸಂಸ್ಮರಣೆ, ಸಂಮಾನ, ಯಕ್ಷಗಾನ ಬಯಲಾಟ, ಹಿರಿಯ ಕಲಾವಿದ ಸುಳ್ಳಳ್ಳಿ ವಾಸಿ, ಬೀರಗೆರೆ ಚಿದಾನಂದಯ್ಯನವರನ್ನು ಸಂಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಬ್ಬಿಗೆ ಪರಮೇಶ್ವರಯ್ಯ ವಹಿಸಿದ್ದರು. ಅಭ್ಯಾಗತರಾಗಿ ಕಲಾಪೋಷಕ ಉಡುಚೆ ಚಿದಂಬರ ಭಟ್ಟರು, ಬೆಂಗಳೂರು ನಿವಾಸಿ ಕುಂಬಳೆ ಚಂದ್ರಶೇಖರ ರಾವ್, ಗ್ರಾಮಪಂಚಾಯ್ತಿ ಸದಸ್ಯರಾದ ಸುಬ್ರಹ್ಮಣ್ಯ ಆಚಾರ್ ಉಪಸ್ಥಿತರಿದ್ದರು. ಹೆಚ್. ಎಸ್. ಅಶೋಕ್‌ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಡಿ. ಪಿ. ಕೃಷ್ಣಮೂರ್ತಿಯವರು ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕುಂಬಳೆ ಚಂದ್ರಶೇಖರರು ಶಾಲು ಹೊದೆಸಿ ಮಾನಪತ್ರ, ಸ್ಮರಣಿಕೆ ನೀಡಿ ಚಿದಂಬರಯ್ಯರನ್ನು ಸಂಮಾನಿಸಿದರು.. ಗುಡ್ಡೆಹಿತ್ಲು ಸುಬ್ರಹ್ಮಣ್ಯ ಭಟ್ಟರು ಅಭಿನಂದನಾ ಭಾಷಣ ಮಾಡುತ್ತಾ ಇದೊಂದು ಸಾರ್ಥಕ ಕಾರ್ಯಕ್ರಮ. ಚಿದಂಬರಯ್ಯನವರು ಉತ್ತಮ ಸ್ತ್ರೀ ವೇಷದಾರಿ. ಅವರ ದಾಕ್ಷಾಯಿಣಿ, ರತ್ನಾವತಿ, ಪ್ರಭಾವತಿ, ಶಕುಂತಲೆ ಮುಂತಾದ ಪಾತ್ರಗಳು ಅನುಕರಣೀಯ ಎಂದರಲ್ಲದೇ 80ರ ದಶಕದಲ್ಲಿ ಬೊಮ್ಮಾಪುರ ಮೇಳದಲ್ಲಿ ಚಿದಂಬರಯ್ಯನವರ ಒಡನಾಟ ನೆನಪಿಸಿ ಕೊಂಡರು. ನಿಗರ್ವಿ, ಸಜ್ಜನರೂ ಆದ ವಯೋವೃದ್ಧ ಚಿದಂಬರಯ್ಯನವರನ್ನು ಸಂಮಾನಿಸಿದ್ದು ಶ್ಲಾಘನೀಯ, ಸಾರ್ಥಕ ಎಂದರು. ಸಂಮಾನ ಸ್ವೀಕರಿಸಿ ಮಾತನಾಡಿದ ಚಿದಂಬರಯ್ಯವರು ಭಾವಪರವಶರಾಗಿ ಬಣ್ಣದ ಬದುಕಿನಿಂದ ನಿವೃತ್ತರಾಗಿ ಮೂರು ದಶಕ ಕಳೆಯಿತು.



ಈ 80ರ ಹರೆಯದಲ್ಲಿ ನನ್ನನ್ನು ಕರೆಸಿ ತವರಿನಲ್ಲಿ ಮಾಡಿದ ಸಂಮಾನಕ್ಕೆ ಸಮಾನವಾದ ಪ್ರಶಸ್ತಿ ಮತ್ತೊಂದಿಲ್ಲ ಎಂದರು. ಇದರ ರುವಾರಿ ಮುಂಬೈ ನಿವಾಸಿ ಕುಂಬಳೆ **ಸತೀಶ್ ಕೆ.ಸಿ.**, ಅರಳಿಕಟ್ಟೆ ಭಾಸ್ಕರ್ ರಾವ್ ಸಂಸ್ಮರಣಾ ಸಮಿತಿ, ಕಲಾವಿದ, ಸಂಘಟಕ, ಗುಡ್ಡೆಹಿತ್ಲು ಸುಬ್ರಹ್ಮಣ್ಯ ಭಟ್ಟರು ಇವರಿಗೆ ಆನಂದತುಂದಿಲರಾಗಿ ಕೃತಜ್ಞತೆ ಸಲ್ಲಿಸಿದರು. ನಂತರ ಕುಂಬಳೆ ಸುರೇಶ್ ಧನ್ಯವಾದ ಸಮರ್ಪಣೆ ಮಾಡಿದರು. ಗುಡ್ಡೆಹಿತ್ಲು ಸುಬ್ರಹ್ಮಣ್ಯ ಭಟ್ಟರ ಸಂಯೋಜನೆಯಲ್ಲಿ ಭಸ್ಮಾಸುರ ಮೋಹಿನಿ ಯಕ್ಷಗಾನ ಬಯಲಾಟ ನಡೆಯಿತು. ಹೆರಂಜಾಲು ಗೋಪಾಲ ಗಾಣಿಗರ ಭಾಗವತಿಕೆ, ಕೇಡಲಸರ ನಾಗಭೂಷಣರ ಮದ್ದಳೆ, ರಾಧಾಕೃಷ್ಣ ಕುಂಜತ್ತಾಯರ ಚಂಡೆವಾದನದಿಂದ ಪ್ರದರ್ಶನದ ಯಶಸ್ಸಿಗೆ ಕಾರಣವಾಯಿತು. ಅಬರೀಶ್ ಭಾರದ್ವಾಜರ ದೇವೇಂದ್ರ, ಕುಂಬಳೆ ಪ್ರಭಾಕರರ ವಾಯು, ಕುಮಾರ್ ಅಭಿಷೇಕ್ ಕುಂಬಳೆ ಅಗ್ನಿ ಮತ್ತು ಬ್ರಹ್ಮ, ಜೈಕುಮಾರ್ ಜೈನ್‌ರ ಬ್ರಾಹ್ಮಣ, ಸುಬ್ರಹ್ಮಣ್ಯ ಭಟ್ಟರ ಈಶ್ವರ, ಶ್ರೀಮತಿ ಸೀತಾಲಕ್ಷ್ಮಿಯವರ ಪಾರ್ವತಿ, ಶ್ರೀಮತಿ ಕಿರಣ್ ಪೈಯವರ ವಿಷ್ಣು, ಶಶಿಧರ ಪಡುಕೋಣೆಯವರ ಮೋಹಿನಿ, ಹವ್ಯಾಸಿ ಕಲಾವಿದ ಸತೀಶ್ ಕೆ.ಸಿ.ಯವರ ಭಸ್ಮಾಸುರನ ಪಾತ್ರವನ್ನು ನಿರ್ವಹಿಸಿದ್ದರು. ಉದ್ಯೋಗ ನಿಮಿತ್ತ ಮುಂಬೈಯಲ್ಲಿ ನೆಲೆಸಿದ್ದ ಸತೀಶ್ ಒಬ್ಬ ಹವ್ಯಾಸಿ ಕಲಾವಿದ. ಯಕ್ಷಗಾನ ಕಲೆಯಲ್ಲಿ ಅಪಾರವಾದ ಆಸಕ್ತಿ, ಗೌರವ. ನಿಗರ್ವಿಯಾದ ಸತೀಶ್ ಕಲೆ, ಕಲಾವಿದರ ಪೋಷಕರೂ ಹೌದು. ಕೆಲಸದ ಒತ್ತಡದಲ್ಲಿಯೂ ಮುಂಬೈ ನಗರಕ್ಕೆ ಹಿರಿಯ ಕಲಾವಿದರನ್ನು ಕರೆಸಿ ಮಾರ್ಗದರ್ಶನ ಪಡೆದು ಅನೇಕ ಕಾರ್ಯಕ್ರಮ ಮಾಡುತ್ತಾರೆ. ಅಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತುಂಬು ಹೃದಯದಿಂದ ಧನ ಸಹಾಯ ಮಾಡುತ್ತಾರೆ. ತನ್ನ ಕುಟುಂಬದವರಾದ ಅರ್ಥದಾರಿ ದಿ| ಭಾಸ್ಕರ ರಾಯರ ನೆನಪಿನಲ್ಲಿ ಊರಿಗೆ ಬಂದಾಗ ಒಂದು ಕಾರ್ಯಕ್ರಮ ಮಾಡಿ ಹಿರಿಯ ಕಲಾವಿದರನ್ನು ಸಂಮಾನಿಸುತ್ತಿರುವುದು ಶ್ಲಾಘನೀಯ. ಇವರು ನಿರ್ವಹಿಸಿದ ಯಾವುದೇ ಪಾತ್ರವನ್ನು ಮತ್ತೊಬ್ಬರಿಗೆ ತುಲನೆ ಮಾಡಿ ವಿಮರ್ಶಿಸದೆ ಕಲೆ, ಕಲಾವಿದರ ಬಗ್ಗೆ ಇವರಿಗಿರುವ ಗೌರವವನ್ನು, ಫಲಾಪೇಕ್ಷೆಯಿಲ್ಲದ ಇವರ ಕಲಾಸೇವೆಯನ್ನು ಗುರುತಿಸಿ ಕಲಾಭಿಮಾನಿಗಳು ಇವರನ್ನು ಪ್ರೋತ್ಸಾಹಿಸಿದರೆ ಕಲೆ, ಕಲಾವಿದರನ್ನು ಪ್ರೋತ್ಸಾಹಿಸಿದಂತೆ.

**ವರದಿ : ಸುಬ್ರಹ್ಮಣ್ಯ ಭಟ್, ನಿಟ್ಟೂರು**

---

*ಲಘು ಬರಹ*

## ಮಾವಿನ ಹಣ್ಣಿನ ರಸಾಯನ

ಮುಂಬಯಿಯಂತಹ ಮಹಾನಗರಗಳಲ್ಲಿರುವ ಎಲ್ಲ ಮಹಿಳೆಯರು ಸಾಧಾರಣವಾಗಿ ಬೇಸಿಗೆ ರಜೆಯನ್ನು ಎದುರು ನೋಡುತ್ತಿರುತ್ತಾರೆ. ಮಕ್ಕಳ ಓದು, ಟ್ಯೂಶನ್, ಪರೀಕ್ಷೆ, ಇವೆಲ್ಲವುಗಳಿಂದ ಫ್ರೀಯಾಗಿ ಊರಿಗೆ ಹೋಗುವುದೆಂದರೆ ಹಕ್ಕಿಯೊಂದು ರೆಕ್ಕೆಬಿಚ್ಚಿ ಸ್ವತಂತ್ರವಾಗಿ ಬಾನಲ್ಲಿ ಹಾರಾಡಿದಂತ ಅನುಭವ.

ಅತ್ತೆ-ಮಾವಂದಿರು, ಹೆತ್ತವರು ಒಡಹುಟ್ಟಿದವರನ್ನು ಭೇಟಿಯಾಗುವ ಸದವಕಾಶ. ಈ ಸಲ ನಾವು ನಮ್ಮ ಮಗನ CET ನಂತರ ಮೇ 15ನೇ ತಾರೀಕು ಮುಂಬಯಿಯಿಂದ ಹೊರಟು 16ನೇ ತಾರೀಕು ನಮ್ಮ ಊರಿಗೆ (ಬಿಸ್ಲುಕೊಪ್ಪ) ತಲಪಿದೆವು. ಹೋಗುತ್ತಿದ್ದಂತೆಯೇ ಹಲಸು, ಮಾವಿನ ಹಣ್ಣಿನ ಪರಿಮಳ, ಘಂ ಅಂತ ಬರುತ್ತಿತ್ತು. ಯಾರನ್ನು ಭೇಟಿಯಾಗಲು ಹೋದರು ಹಲಸಿನ ಹಣ್ಣಿನ ಕಡಬು, ಮಾವಿನ ಹಣ್ಣಿನ ರಸಾಯನದ ಊಟ.

ಊರಿನ ಶಾಂತ ವಾತಾವರಣ ಹಸಿರಿನ ಗಿಡಮರಗಳು, ಅಂಗಳದಲ್ಲಿರುವ ಮಲ್ಲಗೆ ಹೂಗಳು ನಿಜಕ್ಕೂ ಕಣ್ಣಿಗೆ ತಂಪು ನೀಡುತ್ತದೆ. ಇವೆಲ್ಲದರ ಜೊತೆ ನಮ್ಮ ಬಾಲ್ಯದ ಸ್ನೇಹಿತೆಯರು ಸಿಕ್ಕಿಬಿಟ್ರೆ ಅಲ್ಲಿ ಉಂಟಾಗುವ ವಾತಾವರಣವೇ ಬೇರೆ. ಒಟ್ಟಾಗಿ ಸ್ಕೂಲಿಗೆ ಹೋಗುತ್ತಿದ್ದುದು ಗೇರು ಮರ, ಮಾವಿನಮರ, ಅಂತ ಗುಡ್ಡಬೆಟ್ಟವೆಲ್ಲ ಸುತ್ತಿದ್ದು, ನಕ್ಕು ನಲಿದಿದ್ದು, ಎಲ್ಲ ನೆನಪು ಮಾಡಿಕೊಂಡು ನಮ್ಮ ಬಾಲ್ಯವೇ ಮತ್ತೊಮ್ಮೆ ಮರುಕಳಿಸಿದಂತಾಗುತ್ತದೆ.

ವರ್ಷದಲ್ಲಿ ಹೀಗೊಮ್ಮೆ ಊರಿಗೆ ಹೋಗಿ ಕೆಲವು ದಿನ ಉಳಿದು ಬರುವುದರಿಂದ ನಮ್ಮ ಈ ಪಟ್ಟಣದ ಯಾಂತ್ರಿಕ ಬದುಕಿಗೆ ಅರ್ಥಬರಬಹುದಲ್ಲವೇ?

**ಸುಧಾ ಕೆ. ಹೆಗಡೆ**

*Page Donated by : **Shri Suhas Gunishastri**, Prabhadevi In the memory ofhis parents **Late Smt. Rajeshwari & Late Shri P. V. Gunishastri** , Past President, H.W.T. (Dec.-2012)*

# ಭಾಸ ಬೋಧ

✍ ಪ್ರೊ। ವಿಷ್ಣು ಜೋಶಿ, ಕುಮಟಾ

## ಆತ್ಮಸ್ತುತಿಯಿಂದ ಗೌರವ ಹಾನಿ

**ನಾಭಿಜಾತಾವಿಕತ್ಥಂತೇ**

*( ಯಜ್ಞಫಲಮ್)*

**ಅಭಿಜಾತರು ಗರ್ವ ಪಡುವುದಿಲ್ಲ**

ಈ ಜಗತ್ತಿನಲ್ಲಿ ಹೊಗಳಿಕೆಯಿಂದ ಏರದೇ ಇರುವ ವ್ಯಕ್ತಿಗಳು ವಿರಳರೇ ಸರಿ. ಕೆಲವರು ಪ್ರತಿಕಾರ್ಯದಲ್ಲಿಯೂ ಸ್ತುತಿಯನ್ನು ಅಪೇಕ್ಷಿಸುತ್ತಾರೆ. ಅವರ ಸ್ವಭಾವ ತಿಳಿದಿರುವ ಸಮಯ ಸಾಧಕರು ಅವರನ್ನು ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಆತ್ಮಸ್ತುತಿ-ಆತ್ಮಹತ್ಯೆಗೆ ಸಮಾನ.

ಕೆಲವರಿದ್ದಾರೆ ಅವರನ್ನು ಬೇರೆಯಾರೂ ಹೊಗಳದೇ ''ಆತ್ಮರತಿ''ಗೆ ಒಳಗಾಗಿ ತಮ್ಮ ಬಗ್ಗೆ ತಾವೇ ಹೇಳಿಕೊಂಡು ತಿರುಗುತ್ತಾರೆ. ಪಾಪ ! ಅವರನ್ನು ಯಾರೂ ಹೊಗಳದೇ ಇದ್ದಾಗ ಅವರಾದರೂ ಏನು ಮಾಡಿಯಾರು? ಸಭೆ ಸಮಾರಂಭಗಳನ್ನು ಗಮನಿಸಿ, ಅಲ್ಲಿ ಅತಿಥಿಗಳ ಪರಿಚಯ ಮಾಡುವವನು ಅವರ ಪರಿಚಯವೊಂದನ್ನು ಬಿಟ್ಟು ಬೇರೆಲ್ಲವನ್ನು ಮಾಡುತ್ತಾನೆ. ಅವನು ಅವರನ್ನು ಹಾಡಿಹೊಗಳುವುದೇ ಅವರ ಪರಿಚಯ. ಆ ವ್ಯಕ್ತಿಯ ಬಗ್ಗೆ ಚೆನ್ನಾಗಿ ತಿಳಿದವರು ಸಭೆಯಲ್ಲಿ ಇದ್ದರೆ ಅವರಿಗೆ ಮುಜುಗರ ಉಂಟಾಗುವ ಸಂದರ್ಭ ಒದಗುತ್ತದೆ.

ಪರಸ್ಪರ ಪ್ರಶಂಸೆಯಲ್ಲಿ ನೀ ನನಗಿದ್ದರೆ ನಾನಿನಗೆ ಎನ್ನುವ ಸಹಕಾರೀ ತತ್ತ್ವವಿದೆ. ಈ ಶ್ಲೋಕವನ್ನು ಗಮನಿಸಿ

**ಉಷ್ಟ್ರಾಣಾಂ ಚ ವಿವಾಹೇಷು ಗಾರ್ಧಬಾಃ ಸ್ತುತಿಪಾಠಕಾಃ।**
**ಪರಸ್ಪರಂ ಪ್ರಶಂಸಂತಿ ಅಹೋರೂಪ ಅಹೋಧ್ವನೀ ॥**

ಒಂಟೆಗಳ ಮದುವೆಯಲ್ಲಿ ಕತ್ತೆಗಳೇ ಸ್ತುತಿ ಪಾಠಕರಾಗಿದ್ದರಂತೆ ಪರಸ್ಪರರನ್ನು ಹೊಗಳುತ್ತಿದ್ದರು. ಕತ್ತೆಗಳು ಒಂಟೆಗೆ ಅಹಾ ಎಂತಹ ಚೆಂದ ರೂಪ ಎಂದು ಹೇಳಿದರೆ, ಒಂಟೆಗಳು ಕತ್ತೆಗೆ ಅಹಾ ಎಷ್ಟು ಇಂಪಾದ ಧ್ವನಿ ಎಂದು ಪ್ರಶಂಸಿಸಿದವಂತೆ. ಅನೇಕ ಸಂದರ್ಭದಲ್ಲಿ ನಮ್ಮ ಸುತ್ತಲಿನ ಸಮಾಜದಲ್ಲಿ ಹೀಗೆ ಆಗುವುದುಂಟು.

ಭಾಸಕವಿ ಜೀವನದ ಮೌಲ್ಯಗಳನ್ನು ತನ್ನ ಕೃತಿಗಳ ತುಂಬಾ ಎತ್ತಿ ಹಿಡಿದಿದ್ದಾರೆ. ಬಹುತೇಕವಾಗಿ ಆ ಮೌಲ್ಯಗಳನ್ನು ತುಂಬಿಕೊಂಡೆ ಮಹಾಕವಿ ತುಂಬು ಬಾಳನ್ನು ಅನುಭವಿಸಿರಬೇಕು. ಭಾಸನ ನಾಟಕವೆಂದರೆ ಒಂದು ರೀತಿಯ ''ಕೋಡ್ ಆಫ್ ಕಾಂಡಕ್ಟ'' ಇದ್ದಂತೆ. ಅಭಿಜಾತರು, ಸಂಸ್ಕಾರವಂತರು ಅತ್ಮಸ್ತುತಿಯನ್ನು ಮಾಡಿಕೊಳ್ಳುವುದೇ ಇಲ್ಲ. ಇಲ್ಲಿ ಯಾರಾದರೂ ಹೋಗಳಲಿಕ್ಕೆ ಆರಂಬಿಸಿದರೆ ಅವರು ದೂರ ಸರಿಯುತ್ತಾರೆ. ಇದು ಅಪೇಕ್ಷಣೀಯವಾದ ಗುಣ. ನಾವು ನಮ್ಮ ಹೊಗಳಿಕೆಗೆ ಅಷ್ಟೊಂದು ಮಹತ್ವ ಕೊಡಬಾರದು. ಕಾರಣ ಈ ಸ್ತುತಿ ನಮ್ಮನ್ನು ದಿಕ್ಕು ತಪ್ಪಿಸುವ ಸಾಧ್ಯತೆ ಇದೆ.

**ಇಂದ್ರೋಪಿ ಲಘುತಾಂ ಯಾತಿ**
**ಸ್ವಯಂಪ್ರಖ್ಯಾಪಿತೈಃ ಗುಣೈಃ**

*( ಚಾಣಕ್ಯ ನೀತಿ ಶಾಸ್ತ್ರ)*

ಅಂದರೆ ತನ್ನ ಗುಣಗಳನ್ನು ತಾನೇ ಹಾಡಿ ಹೊಗಳಿಕೊಂಡರೆ ಇಂದ್ರನೂ ಸಹಾ ಗೌರವ ಕಳೆದುಕೊಳ್ಳುತ್ತಾನಂತೆ. ಇನ್ನು ಸಾಮಾನ್ಯರ ಪಾಡೇನು? ಅಷ್ಟೇ ಅಲ್ಲ.

**''ನ ಸ್ವಯಂ ಸಂಸ್ತುತಿಪದ್ಯೈಃ ಗ್ಲಾನಿಂ ಗುಣಗಣಂ ನಯೇತ್''**

*( ಚಾರುಚರ್ಯ)*



ಅಂದರೆ ತಾನೇ ಹೊಗಳಿಕೊಳ್ಳುವುದರಿಂದ ಗುಣಹ್ರಾಸ ಆಗುತ್ತದೆ.

ಈ ಆತ್ಮಸ್ತುತಿ ಕೊನೆಗೆ ಚಟವಾಗುತ್ತದೆ. ''ನಾನು'' ''ನನ್ನಿಂದ'' ಎನ್ನುವ ಶಬ್ಧವಿಲ್ಲದೇ ಅವರ ವಾಕ್ಯವೇ ಆರಂಭ ಆಗುವುದಿಲ್ಲ. ಇಂತಹವರನ್ನು ಕಂಡು ಜನರು ಜಿಗುಪ್ಸೆ ಪಡುತ್ತಾರೆ. ಮನಃ ಶಾಸ್ತ್ರದ ಪ್ರಕಾರ ಅತ್ಮಸ್ತುತಿ ''ಇನ್‌ಫಿರಿಯಾರಿಟಿ ಕಾಂಪ್ಲೆಕ್ಸ್'' (ಕೀಳರಿಮೆಯನ್ನು) ಧ್ವನಿಸುತ್ತದೆಯಂತೆ.

ದೊಡ್ಡ ವ್ಯಕ್ತಿಗಳು ಎಂದಿದೂ ಆತ್ಮಸ್ತುತಿಯನ್ನು ಮಾಡಿಕೊಂಡಿಲ್ಲ. ಶ್ರೀರಾಮ, ಶ್ರೀಕೃಷ್ಣ, ಮಹಾತ್ಮಾಗಾಂಧಿ ಮೊದಲಾದವರು ಆತ್ಮಸ್ತುತಿಯಿಂದ ಗಾವುದ ದೂರವಿದ್ದರು. ಆತ್ಮಸ್ತುತಿಯಂತೆ ಅನ್ಯನಿಂದೆಯೂ ಗರ್ಹಿತವಾದದ್ದು. ●

## ANNOUNCEMENT

We are pleased to inform you that Mumbai and our Kolad Goushala will be blessed by the arrival of Parama Pujya Guruji, Gokarna Mandaladheeshwara, Srimad Jagadguru Shankaracharya Shree Shree Raghaveshwara Bharati Mahaswamiji in the second week of June 2012. We request all devotees to gather in large numbers to welcome Poojya Guruji and take His Darshan. Details of the visit will be intimated to all shishyas later. Those interested in offering Bhiksha Seva, Paada Puja Seva and sponsoring any events or give any contributions may please contact Shri K.S.Bhat (Kuloor) 9594165004 or Smt. Ishwari Bhat - 9158064444.

Rajalakshmi Kameshwar Joshi, Prasar Vibhag,
Mumbai Valaya, Ramachandrapura Matha

## *Matrimonial*

Alliance invited for a girl 31 years, 5'7" ht., Vishwamitra Gotra, Poorvashada Nakshatra, B.Sc., (Maths),LL.B., Diploma in Naturopathy, from an engineer or post graduate boy working in Mumbai or any other cities. Those who are interested may ***Contact*** : 8652539030 / 022-24307169

Alliance invited for an very fair engineer girl, 26 years, 5'4" ht., Vishwamitra gotra, Moola Nakshatra, from an engineer or post graduate boy from cultured family. Those who are interested may ***Contact*** : 08387-254415 or 9481463240.

Alliance invited for a girl, 27 years, 5'7" ht., Kashyapa gotra, Swati Nakshatra, M.Sc., P.hd., working in I.I.S.C. Bangalore from a boy post graduate in engineering or medicine working in India or abroad. Those who are interested may ***Contact*** : 9945350079 or 9483668222 or (08387) 236042

*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR,*** *GHATKOPAR IN THE MEMORY OF* ***LATE SHRI T. R. BHATSHIKAR*** *(DEC.-2012)*

# ಮೋಹನದಾಸ ಕರಮಚಂದ ಗಾಂಧೀಜಿಯವರ ಸಂಕ್ಷಿಪ್ತ ಆತ್ಮಕಥನ

*( ಹಿಂದಿನ ಸಂಚಿಕೆಯಿಂದ )*

**✍ ಶ್ರೀಮತಿ ಎಚ್.ಎಲ್. ಸೀತಾದೇವಿ, ಮೈಸೂರು**

ಮನೆಗೆ ಬಂದ ತಕ್ಷಣ 'ನೀವು ನನ್ನ ಮೇಲೆ ಹಲ್ಲೆ ಮಾಡಿಸಿದ್ದೀರಿ. ನನ್ನನ್ನು ಅನುಮಾನಿಸಿದ್ದೀರಿ. ತಕ್ಷಣ ಕ್ಷಮೆಯಾಚಿಸದಿದ್ದಲ್ಲಿ ನಿಮ್ಮ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂಬ ಪತ್ರವನ್ನು ಆ ಅಧಿಕಾರಿಗೆ ಕಳುಹಿಸಿದೆ. ಮರು ಟಪಾಲಿನಲ್ಲೇ ಮಾರೋಲೆ ಬಂತು. 'ನಿನ್ನ ನಡವಳಿಕೆ ಅಸಭ್ಯವಾಗಿತ್ತು. ಹೊರಟು ಹೋಗೆಂದು ಹೇಳಿದರೂ ನೀನು ಹೋಗಲಿಲ್ಲ. ಬೇರೆ ಮಾರ್ಗವಿಲ್ಲದೆ ಜವಾನನ್ನು ಕರೆಯಬೇಕಾಯಿತು. ಆ ಬಾಗಿಲು ತೋರಿಸಿದರೂ ನೀನು ಕದಲಿಲ್ಲ. ಹಾಗಾಗಿ ನನ್ನನ್ನು ಹೊರಕ್ಕೆ ಕಳುಹಿಸುವಷ್ಟು ಬಲ ಪ್ರಯೋಗ ಮಾಡಬೇಕಾಯಿತು. ಇನ್ನು ದಾವೆಯ ವಿಷಯದಲ್ಲಿ ನಿನಗಿಷ್ಟ ಬಂದಂತೆ ನೀನು ಮಾಡಿಕೊಳ್ಳಬಹುದು' ಎಂದಾತ ತಿಳಿಸಿದ್ದ.

ಆ ಮಾರೋಲೆಯನ್ನು ಜೇಬಿನಲ್ಲಿಟ್ಟುಕೊಂಡಿದ್ದೆ. ನಾನು ಅದನ್ನು ಅಣ್ಣನಿಗೆ ತೋರಿಸಿ ನಡೆದ ವಿಷಯ ತಿಳಿಸಿದೆ. ನನಗೆ ಆ ರೀತಿಯಾಗಿ ಮುಖಭಂಗವಾಗಿದ್ದಕ್ಕೆ ಆತನಿಗೆ ದುಃಖವಾಯಿತು. ನನ್ನನ್ನು ಸಮಾಧಾನ ಪಡಿಸುವುದು ಹೇಗೆ ಎಂಬುದು ಆತನಿಗೆ ಗೊತ್ತಾಗಲಿಲ್ಲ. ಆ ಅಧಿಕಾರಿಯ ವಿರುದ್ಧ ಹೇಗೆ ಕ್ರಮ ಕೈಗೊಳ್ಳುವುದೆಂಬ ಬಗ್ಗೆ ಆತ ತನ್ನ ವಕೀಲ ಮಿತ್ರರೊಂದಿಗೆ ಚರ್ಚಿಸಿದ.

ಇದೇ ಸಮಯದಲ್ಲಿ, ಯಾವುದೋ ಒಂದು ಮೊಕದ್ದಮೆಯ ಸಂಬಂಧದಲ್ಲಿ ಫಿರೋಜ್ ಷಾ ಮೆಹ್ತಾ ಅವರು ಮುಂಬಯಿಯಿಂದ ರಾಜಕೋಟೆಗೆ ಬಂದಿದ್ದರು. ಆದರೆ ನನ್ನಂಥ ಅತಿ ಕಿರಿಯ ಬ್ಯಾರಿಸ್ಟರ್ ಅವರನ್ನು ನೋಡುವುದಾದರೂ ಹೇಗೆ ಎಂಬ ಹಿಂಜರಿಕೆಯಿಂದ ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಬೇರೊಬ್ಬ ವಕೀಲರ ಮೂಲಕ ಅವರಿಗೆ ಕಳುಹಿಸಿ ಸಲಹೆ ಕೋರಿದೆ. ಎಷ್ಟೋ ವಕೀಲರಿಗೆ, ಬ್ಯಾರಿಸ್ಟರಿಗೆ ಇಂತಹ ಕಹಿ ಅನುಭವಗಳಾಗಿವೆ ಎಂದು ಗಾಂಧೀಗೆ ಹೇಳಿ. ಆತ ಇನ್ನೂ ಬಿಸಿ ರಕ್ತದ ಯುವಕ. ಈಗಷ್ಟೇ ಇಂಗ್ಲೆಂಡಿನಿಂದ ಬಂದಿದ್ದಾನೆ. ಬ್ರಿಟಿಷ್ ಅಧಿಕಾರಿಗಳ ಬಗ್ಗೆ ಅವನಿಗೆ ಏನೂ ತಿಳಿಯದು. ಆತ ಇಲ್ಲಿ ಹಣ ಸಂಪಾದಿಸಿಕೊಂಡು ಸುಖವಾಗಿ ಬಾಳಬೇಕೆಂದಿದ್ದರೆ ಸುಮ್ಮನೆ ಈ ಚೀಟಿಗಳನ್ನೆಲ್ಲ ಹರಿದು ಹಾಕಿ, ಅವಮಾನ ನುಂಗಿಕೊಳ್ಳಲಿ. ಆ ಅಧಿಕಾರಿಯ ವಿರುದ್ಧ ಖಟ್ಲೆ ಹೂಡುವುದರಿಂದ ಏನೂ ಪ್ರಯೋಜನವಾಗದು. ಬದಲಿಗೆ ಆತನೇ ಇವನ ಸರ್ವನಾಶ ಮಾಡಬಹುದು. ಈತ ಜೀವನದ ಅನುಭವ ಇನ್ನೂ ಪಡೆಯಬೇಕಾಗಿದೆ ಎಂಬ ಪ್ರತ್ಯುತ್ತರ ಬಂತು.

ನನಗೆ ಈ ಸಲಹೆ ವಿಷಕ್ಕಿಂತಲೂ ಕಹಿಯಾಗಿತ್ತು. ಆದರೆ ನುಂಗಲೇ ಬೇಕಾಗಿತ್ತು. ಬೇರೆ ದಾರಿಯಿಲ್ಲದೆ ಅವಮಾನವನ್ನು ನುಂಗಿದೆ, ಅದರ ಲಾಭವನ್ನೂ ಪಡೆದೆ. ಇನ್ನು ಮುಂದೆ ಎಂದೂ ಇಂಥ ಇಕ್ಕಟ್ಟಿಗೆ ಸಿಕ್ಕಿಕೊಳ್ಳುವುದಿಲ್ಲ. ಸ್ನೇಹದ ದುರುಪಯೋಗ ಮಾಡಿಕೊಳ್ಳುವುದಿಲ್ಲ ಎಂದು ದೃಢವಾಗಿ ನಿರ್ಧರಿಸಿದೆ. ಅದಕ್ಕೆಂದೂ ಭಂಗ ತರಲಿಲ್ಲ. ಈ ಮೊದಲ ಆಘಾತ ನನ್ನ ಜೀವನದ ದಿಕ್ಕನ್ನು ಬದಲಾಯಿಸಿತು. ಆ ಅಧಿಕಾರಿಯ ಬಳಿಗೆ ಹೋಗಿದ್ದು ತಪ್ಪು ಎಂಬುದೇನೋ ಸರಿ. ಆದರೆ ಆತನ ಕೋಪ, ಅಸಹನೆ, ಅಹಂಕಾರ ಮಿತಿ ಮೀರಿದ್ದಾಗಿತ್ತು. ಕತ್ತು ಹಿಡಿದು ದಬ್ಬಿಸುವಂಥ ಅಪರಾಧವನ್ನು ನಾನೇನೂ ಮಾಡಿರಲಿಲ್ಲ. ಆತನ ಅಧಿಕಾರ ಮದ, ರೋಷಾವೇಷ ಹೇಳತೀರದಷ್ಟಿತ್ತು.

ಈಗ ನನ್ನ ಕೆಲಸದ ಹೆಚ್ಚು ಭಾಗ ಆತನ ಕೋರ್ಟ್‌ನಲ್ಲೇ ಇರುತ್ತಿತ್ತು. ಆತನ ನೆರವು ಪಡೆಯುವ, ಆತನ ಮುಂದೆ ಅಂಗಲಾಚುವ ಇಚ್ಛೆ ನನಗಿರಲಿಲ್ಲ. ದಾವೆ ಹೂಡುವೆನೆಂದು ಬೆದರಿಕೆ ಹಾಕಿದ ನಂತರ ಸುಮ್ಮನಿರುವುದು ತರವಲ್ಲ ಎನಿಸುತ್ತಿತ್ತು.

ಏತನ್ಮಧ್ಯೆ ಕಾಠೇವಾಡದ ರಾಜಕೀಯ ತಿಕ್ಕಾಟದ ಅನುಭವವಾಗತೊಡಗಿತು. ಹಲವು ಸಣ್ಣಪುಟ್ಟ ಪ್ರಾಂತ್ಯಗಳ ಕೂಟವಾದ ಕಾಠೇವಾಡದಲ್ಲಿ ರಾಜಕೀಯ ಪುಢಾರಿಗಳೂ ಸಾಕಷ್ಟು ಮಂದಿ ಇದ್ದರು. ಅವರ ಪ್ರಭಾವವೂ ಸಾಕಷ್ಟಿತ್ತು. ರಾಜರು ಹೊಗಳುಭಟ್ಟರ ಕೈಗೊಂಬೆಗಳಾಗಿ, ಚಾಡಿ ಮಾತುಗಳಿಗೆ ಕಿವಿಗೊಡುತ್ತಿದ್ದರು. ಅಧಿಕಾರಿಯ ಮಾತು ಹಾಗಿರಲಿ, ಜವಾನನ್ನೂ ಒಲಿಸಿಕೊಳ್ಳ ಬೇಕಾಗಿತ್ತು. ಎಷ್ಟೋ ವೇಳೆ ಆತನೇ ಅಧಿಕಾರಿಗಿಂತ ಪ್ರಬಲನಾಗಿರುತ್ತಿದ್ದ. ಅಧಿಕಾರಿಯ ಕಣ್ಣು, ಕಿವಿ, ಬಾಯಿ ಆಗಿದ್ದ ಶಿರಸ್ತೇದಾರನ ಆದಾಯ, ಅಧಿಕಾರಿಯದಕ್ಕಿಂತಲೂ ಹೆಚ್ಚು ಎಂಬ ಮಾತು ಉತ್ಪ್ರೇಕ್ಷೆಯಾದರೂ, ಆತನ ಖರ್ಚು ವೆಚ್ಚ ಮಾತ್ರ ವರಮಾನಕ್ಕಿಂತ ಹೆಚ್ಚಾಗಿತ್ತು. ಇಂಥ ಕಲುಷಿತ ವಾತಾವರಣದಲ್ಲಿ ಹೇಗೆ ಇರುವುದು ಎಂಬುದೇ ನನ್ನ ಸಮಸ್ಯೆಯಾಗಿತ್ತು. ನನಗೆ ಉಸಿರುಕಟ್ಟುತ್ತಿತ್ತು. ಹಗಲೂ ರಾತ್ರಿ ಆ ಬಗ್ಗೆಯೇ ಚಿಂತಿಸುತ್ತಿದ್ದೆ. ತುಂಬಾ ನಿರುತ್ಸಾಹಿಯಾಗಿದ್ದೆ. ನನ್ನಣ್ಣ ಇದನ್ನೆಲ್ಲ ಗಮನಿಸುತ್ತಿದ್ದ.

ನನಗೆ ಬೇರೆ ಯಾವುದರೂ ನೌಕರಿ ಸಿಕ್ಕಲ್ಲಿ ಈ ವಿಷಮಯ ವಾತಾವರಣದಿಂದ ಪಾರಾಗಬಹುದು ಎನಿಸಿತು. ಆದರೆ ಹಣ, ಅಧಿಕಾರದ ಪ್ರಭಾವವಿಲ್ಲದೆ ಯಾವುದೇ ಉದ್ಯೋಗ ದೊರೆಯುವಂತಿರಲಿಲ್ಲ. ಅಧಿಕಾರಿಯ ಜೊತೆಗಿನ ತಿಕ್ಕಾಟದಿಂದಾಗಿ ವಕೀಲೀ ವೃತ್ತಿಯನ್ನು ಆಶ್ರಯಿಸುವುದೂ ಕಷ್ಟವಾಗಿತ್ತು. ದಿಕ್ಕೇ ತೋಚದ ಪರಿಸ್ಥಿತಿಯಲ್ಲಿದ್ದೆವು. ಎಲ್ಲಿ ಹೋದರೂ ಅಧಿಕಾರಿಯ ಇಷ್ಟವೇ ಕಾನೂನಾಗಿತ್ತು. ನನ್ನ ತಾಳ್ಮೆ ಕೊನೆಗೊಂಡಿತ್ತು.

ಇದೇ ಸಮಯದಲ್ಲಿ ಪೋರ್‌ಬಂದರಿನ ಮೆಮನ್ ಸಂಸ್ಥೆಯಿಂದ ನನ್ನ ಅಣ್ಣನಿಗೆ ಒಂದು ಪತ್ರ ಬಂತು. ನಮ್ಮದು ಒಂದು ದೊಡ್ಡ ಉದ್ಯಮ. ದಕ್ಷಿಣ ಆಫ್ರಿಕಾದಲ್ಲಿ ನಮ್ಮ ವ್ಯಾಪಾರ-ವ್ಯವಹಾರವಿದೆ. ಅಲ್ಲಿನ ನ್ಯಾಯಾಲಯದಲ್ಲಿ ನಾವು 40 ಸಾವಿರ ಪೌಂಡ್ ಪರಿಹಾರ ಕೋರಿ ದಾವೆ ಹೂಡಿದ್ದೇವೆ. ಅದು ತುಂಬಾ ಸಮಯದಿಂದ ನಡೆಯುತ್ತಿದೆ. ನಾವು ಅತ್ಯುತ್ತಮರಾದ ವಕೀಲರು, ಬ್ಯಾರಿಸ್ಟರ್‌ಗಳನ್ನು ನೇಮಿಸಿಕೊಂಡಿದ್ದೇವೆ. ನಿಮ್ಮ ತಮ್ಮನನ್ನೂ ಕಳಿಸಿದರೆ ನಮಗೂ, ಆತನಿಗೂ ಉಪಯೋಗವಾಗುತ್ತದೆ. ಆತ ನಮಗಿಂತ ಚೆನ್ನಾಗಿ ವಕೀಲರಿಗೆ ವಿಷಯಗಳನ್ನು ತಿಳಿಸಬಹುದು. ಜೊತೆಗೆ ಹೊಸ ದೇಶವನ್ನು ನೋಡುವ, ಹೊಸ ಹೊಸ ಪರಿಚಯಗಳನ್ನು ಮಾಡಿಕೊಳ್ಳುವ ಅವಕಾಶ ಆತನಿಗೆ ದೊರೆಯುತ್ತದೆ ಎಂದು ಪತ್ರದಲ್ಲಿ ತಿಳಿಸಲಾಗಿತ್ತು.

ನಮ್ಮಣ್ಣ ನನ್ನೊಂದಿಗೆ ಆ ವಿಷಯ ಪ್ರಸ್ತಾಪಿಸಿದ. ವಕೀಲರು, ಬ್ಯಾರಿಸ್ಟರಿಗೆ ಆ ಸಂಸ್ಥೆಯ ವಿಷಯಗಳನ್ನು ವಿವರಿಸುವದಷ್ಟೇ ನನ್ನ ಕೆಲಸವೋ, ಇಲ್ಲ ಕೋರ್ಟಿಗೆ ಹೋಗಿ ವಾದಿಸಲೂ ಬೇಕೋ ಎಂಬುದು ಸ್ಪಷ್ಟವಾಗಿರಲಿಲ್ಲ. ಆದರೂ ಹೋಗಬೇಕೆಂದು ನಿರ್ಧರಿಸಿದೆ.

ದಾದಾ ಅಬ್ದುಲ್ಲಾ ಮತ್ತು ಕಂಪೆನಿ ಪರವಾಗಿ ನಾನು ದಕ್ಷಿಣ ಆಫ್ರಿಕಾಗೆ ಹೋಗ ಬೇಕಾಗಿತ್ತು. ಆ ಸಂಸ್ಥೆಯ ಪಾಲುದಾರರಾದ ಸೇಠ್ ಅಬ್ದುಲ್ಲಾ ಕರೀಂ ಜವೇರಿ ಅವರನ್ನು ಭೇಟಿ ಮಾಡಿದಾಗ, ಕೆಲಸವೇನೂ ನಿಮಗೆ ಕಷ್ಟವಾಗುವುದಿಲ್ಲ. ದೊಡ್ಡ ದೊಡ್ಡ ಇಂಗ್ಲಿಷರು ನಮ್ಮ ಮಿತ್ರರಾಗಿದ್ದಾರೆ. ನಿಮಗೂ ಅವರ ಪರಿಚಯಲಾಗುತ್ತದೆ. ನೀವು ಅಂಗಡಿಯಲ್ಲೂ ಸಹಾಯ ಮಾಡಬಹುದು. ನಮ್ಮ ಹೆಚ್ಚಿನ ವ್ಯವಹಾರವೆಲ್ಲ ಇಂಗ್ಲಿಷ್‌ನಲ್ಲಿದೆ. ಅದಕ್ಕೆ ನೀವು ನೆರವಾಗಬಹುದು. ನೀವು ನಮ್ಮ ಅತಿಥಿ. ನಿಮಗೆ ಯಾವ ಖರ್ಚೂ ಬೀಳುವುದಿಲ್ಲ. ಒಂದು ವರ್ಷಕ್ಕಿಂತ ಹೆಚ್ಚು ಕಾಲ ನೀವು ಅಲ್ಲಿರಬೇಕಾಗುವುದಿಲ್ಲ. ಮೊದಲನೇ ದರ್ಜೆಯ ಪ್ರಯಾಣ ವೆಚ್ಚ, ಆಫ್ರಿಕಾದಲ್ಲಿ ನಿಮ್ಮ ಊಟ, ವಸತಿಯ ವೆಚ್ಚವನ್ನೆಲ್ಲ ಭರಿಸಿ 105 ಪೌಂಡ್ ಸಂಭಾವನೆ ನೀಡುತ್ತೇವೆ ಎಂದು ತಿಳಿಸಿದರು.

ನಾನಲ್ಲಿಗೆ ಹೋಗುತ್ತಿರುವುದು ಬ್ಯಾರಿಸ್ಟರ್ ಆಗಿ ಅಲ್ಲ. ಅಂಗಡಿಯ ನೌಕರನಾಗಿ ಎಂಬುದು ಸ್ಪಷ್ಟವಾಯಿತು. ಹೇಗಾದರೂ ಸರಿ, ನಾನು ಭಾರತವನ್ನು ಬಿಡಬೇಕೆಂದುಕೊಂಡಿದ್ದೆ. ಹೊಸ ದೇಶವನ್ನು ನೋಡುವ, ಹೊಸ ಹೊಸ ಅನುಭವ ಪಡೆಯುವ ಇಚ್ಛೆ ಪ್ರಬಲವಾಗಿತ್ತು. ಜೊತೆಗೆ ಸಂಸಾರ ನಿರ್ವಹಣೆಗೆ 105 ಪೌಂಡ್‌ಗಳನ್ನು ನಮ್ಮಣ್ಣನಿಗೆ ಕಳುಹಿಸಬಹುದಾಗಿತ್ತು. ಹೆಚ್ಚು ಚರ್ಚೆ ಮಾಡದೆ ಒಪ್ಪಿಕೊಂಡು, ದಕ್ಷಿಣ ಆಫ್ರಿಕಾಗೆ ಹೋಗಲು ಸಿದ್ಧನಾದೆ.

*(ಮುಂದುವರಿಯುವುದು)*

*PAGE DONATED BY : **SHRI V. G. BHAT, NIGDI** (DEC.-2012)*

# *Letters to the Editor*

ಹವ್ಯಕ ಬಂಧು ಭಗಿನಿಯರೇ, ನಮಸ್ಕಾರಗಳು

ನಮ್ಮ ಹವ್ಯಕ ಸಮಾಜ ಎಲ್ಲದರಲ್ಲಿ ಎತ್ತಿದ ಸ್ಥಾನದಲ್ಲಿತ್ತು. ಸಣ್ಣ ಸಮಾಜ ಆದರೂ ದೇವರು, ಗುರುಗಳಲ್ಲಿ ಭಕ್ತಿ ಭಾವನೆಯಿಂದ ಇದ್ದರು. ತಂದೆ-ತಾಯಿಯರು, ಹಿರಿಯರನ್ನು ಮನ್ನಿಸುತ್ತ ಬಂದ ಸಮಾಜ. ಆದರೆ ಕಾಲ ಕಳೆಯುತ್ತ ಬಂದಂತೆ ಇದರಲ್ಲಿ ಬದಲಾವಣೆಗಳು ಕಾಣುತ್ತಿವೆ. ಇದಕ್ಕೆ ಉದಾಹರಣೆ ನಮ್ಮ ಮಹಿಳಾ ಸಮಾವೇಶದ ದಿನ ಅಮಿತಾ ಭಾಗವತರು ಓದಿದ ಕವನ 'ಅಪ್ಪಯ್ಯ ಹೋಗಿಬತ್ನೋ' ಎಲ್ಲಕಡೆ ಕಾಣುವ ನಿಜ ಸಂಗತಿ. ಶಾಂತಾ ಶಾಸ್ತ್ರಿಯವರು ಹೇಳಿದ ಕವನದಲ್ಲಿ ರಾಹು-ಕೇತು ಅಂದ್ರೆ ಅತ್ತೆ-ಮಾವ ಎನ್ನುವದು ಸತ್ಯವಾಗಿದೆ.

ನನಗೆ ಅನಿಸುವಂತೆ ಇಂದಿನ ಜನರಿಗೆ ಸ್ವಲ್ಪ ವಯಸ್ಸಾದ ತಂದೆ-ತಾಯಿಯರು ಹೊರೆಯಾಗುತ್ತಿದ್ದಾರೆ. ಒಂಬತ್ತು ತಿಂಗಳು ಹೊತ್ತು ಹೆತ್ತು ಹಾಲುಣಿಸಿ ಪೋಷಿಸಿದ ತಾಯಿ, ಕೈಹಿಡಿದು ನಡೆಯಲು ಕಲಿಸಿದ ತಂದೆ ಎನ್ನುವ ಭಾವನೆ ಇಲ್ಲದಾಗಿದೆ. ಜೀವನ ಪರ್ಯಂತ ಮಕ್ಕಳ ಪಾಲನೆ ಪೋಷಣೆ ತಮ್ಮ ಮನೆವಾರ್ತೆ ಕೆಲಸದಲ್ಲಿಯೇ ಜೀವವನ್ನು ಸವೆಸಿ, ಇಂದು ಅಶಕ್ತರಾದರೆ (ಇಳಿವಯಸ್ಸಿನಲ್ಲಿ) ಅದು ಅವರ ತಪ್ಪೆ? ತಾವು ಸಂಜೀವಿನಿ ಕುಡಿದಿದ್ದೇವೆ. ನಮಗೆ ಏನೂ ಆಗುವುಗದಿಲ್ಲ ಎನ್ನುವ ಭ್ರಮೆಯಲ್ಲಿದ್ದಾರೆ. ಇಂದು ಹಿರಿಯರನ್ನು (ಅಶಕ್ತರನ್ನು) ಕಡೆಗಣಿಸಿದರೆ ನಮ್ಮ ಹಿಂದೆಯೇ ನಮ್ಮ ಮಕ್ಕಳಿದ್ದಾರೆ. ನಮ್ಮ ಸ್ಥಿತಿ ಏನಾಗುವುದು ಎಂದು ಯೋಚಿಸಿದಂತಿಲ್ಲ ಎನ್ನುವದು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಮ್ಮಲ್ಲಿ ಇನ್ನೊಂದು ಗಾದೆಯ ಮಾತೇ ಇದೆ. 'ಹಣ್ಣೆಲೆ ಉದುರುವಾಗ ಚಿಗುರೆಲೆ ನಕ್ಕಿತ್ತು;' ಈಗ ದೊಡ್ಡ ಕುಟುಂಬಗಳು ಕಾಣಸಿಗುವುದೇ ಅಪರೂಪ ಎನ್ನುವದಕ್ಕಿಂತ ಇಲ್ಲವೇ ಇಲ್ಲವಾಗಿದೆ ಎನ್ನಬಹುದು.

ಇದಕ್ಕಾಗಿ ನಮ್ಮ ಸಮಾಜದಲ್ಲಿ ಪೂರ್ವದಲ್ಲಿ 'ವಾನಪ್ರಸ್ಥ' ಪದ್ಧತಿ ಇತ್ತು. ಈಗ ಇದು ವೃದ್ಧಾಶ್ರಮ ಎಂದಾಗುತ್ತದೆ. ಇದು ಅತಿ ಅವಶ್ಯವೂ ಆಗಿದೆ. ನಮ್ಮ ಹವ್ಯಕ ವೃದ್ಧಾಶ್ರಮ ಬೇಗ ಆಗಲಿ, ನಾವೆಲ್ಲ ಅದಕ್ಕಾಗಿ ಪ್ರಯತ್ನಿಸುತ್ತಿದ್ದೇವೆ. ಇನ್ನೂ ಹೆಚ್ಚು ಪ್ರಯತ್ನಿಸೋಣ. ಮನೆಯಲ್ಲಿ ಇಳಿವಯಸ್ಸಿನ ಅಶಕ್ತರಾದ ಈ ವೃದ್ಧರು ನಿರ್ಲಕ್ಷಿತರಾಗಿ ಖಿನ್ನತೆಯಲ್ಲಿ ಬದುಕುವದಕ್ಕಿಂತ, ಇಲ್ಲಿ ತಮ್ಮ ಸಹ ವಯಸ್ಸಿನವರೊಂದಿಗೆ ಸುಖ-ದುಃಖ ಹಂಚಿಕೊಳ್ಳುತ್ತ ನೆಮ್ಮದಿಯಿಂದ ಇರುವಂತಾಗಲಿ ಎಂದು ನಾವು ಆಶಿಸುತ್ತೇವೆ.

ನಾನು ಗಂಗಾ ಗಣೇಶ ಬಗ್ಗೋಣ ನಮ್ಮ ತಂದೆ ಕೈ.ವಾ. ಗೋಪಾಲಕೃಷ್ಣ ಹೆಗಡೆ ಅವರ ಸ್ಮರಣಾರ್ಥವಾಗಿ ಈ ಮಾತ್ರವನ್ನು ಇಡುತ್ತಿದ್ದೇವೆ. ಇದು ಕೇವಲ ವೃದ್ಧಾಶ್ರಮಕ್ಕೆ ಮೀಸಲು ಇರಲಿ ಎಂದು ನನ್ನ ವಿನಂತಿ. ಈ ವೃದ್ಧಾಶ್ರಮವು ಅದರ ಪಾಲಿಗೆ

Oldage Home ಎನ್ನುವುದಕ್ಕಿಂತ
Goldage Home ಎಂದಾಗಲಿ ಎಂದು ಆಶಿಸುತ್ತೇವೆ.

**ಗಂಗಾ ಎಸ್. ಬಗ್ಗೋಣ**

***( ಶ್ರೀಮತಿ ಗಂಗಾ ಎಸ್. ಬಗ್ಗೋಣ ವೃದ್ಧಾಶ್ರಮಕ್ಕಾಗಿ ರೂಪಾಯಿ 25,000/- ಕೊಟ್ಟ ಹಿನ್ನೆಲೆಯಲ್ಲಿ ಬರೆದ ಪತ್ರ )***

★★★

**Thanks to Havyaka for granting me the Scholarship**

I am Sangeeta N. Hegde currently perceiving the final year degree (B.E.) in the stream of Information Science & Engineering at SJB Institute of Technology.I have received the Scholarship from Havyaka Trust. This has helped me in many ways for my studies.

I am very much thankful and grateful to Havyaka. Hope these encouragements never end for the students like me. Surely I will try to be a part of this in regarding helping needy merit students. Once again from me and behalf of my family heartful thanks to Havyaka Welfare Trust.

Thanking you,

Yours faithfully
**Sangeeta N. Hegde**

---

# ಯಕ್ಷ ಪುರುಷ 'ಪದ್ಮಶ್ರೀ' ಚಿಟ್ಟಾಣಿ



ಕಳೆದಾರು ದಶಕದಲಿ ದಣಿವಿಲ್ಲದೇ
ಕುಣಿದ ಯಕ್ಷಗಾನದ ಮುಕುಟಮಣಿ
ನಮ್ಮ ಹೊಸಾಕುಳಿಯ ಸರ್ವಶ್ರೀ ಚಿಟ್ಟಾಣಿ
ಈಗಿವರು "ಪದ್ಮಶ್ರೀ ಚಿಟ್ಟಾಣಿ" ॥ ೧॥

"ಕುಣೀಬೇಕು..ಮೈ ಮಣೀಬೇಕು"
ಇದು ಯಕ್ಷಪುರುಷನ ಸಿದ್ಧಾಂತ
ಯಾವ ಪಾತ್ರವೇ ಇರಲಿ ಒಳಹೊಕ್ಕು
ನಟಿಸಿ, ಜನರ ರಂಜಿಸುವ ಧೀಮಂತ ॥ ೨॥

ರಂಗದ ಮೇಲೆ ಇವರಿಡುವ ಪ್ರತಿ
ಹೆಜ್ಜೆಯಲ್ಲೂ ಮೂಡುತ್ತದೆ ರೇಖಾಕೃತಿ
ಸಾಗರದಾಚೆಗೂ ಹಬ್ಬಿಹುದು ಇವರಿಂದ
"ಬಡಗುತಿಟ್ಟಿನ ಯಕ್ಷಗಾನದ ಕೀರ್ತಿ" ॥ ೩॥

ಕೀಚಕ, ಭಸ್ಮಾಸುರ, ಕೌರವ, ಸಾಲ್ವರಂತ
ಖಳನಾಯಕ ಪಾತ್ರಗಳೊಡನೆ ಮಿಳಿತ
ಕಾರ್ತವೀರ್ಯ, ಕಲಾಧರ, ಭದ್ರಸೇನರ
ವೇಷದಲಿ "ಶೃಂಗಾರ ನವಿಲ ಕುಣಿತ" ॥ ೪॥

77ರ ಪ್ರಾಯದಲ್ಲೂ 27ರ ಕುಣಿತ
ಕಿರಿ ಕಲಾವಿದರಿಗೆ ಜೀವಂತ ಮಾದರಿ
"ಚಿಟ್ಟಾಣಿ ವ್ಯಕ್ತಿಯಲ್ಲ ಅದ್ಭುತ ಶಕ್ತಿ"
ಕರತಲಾಮಲಕ ನವರಸದ ಅಭಿವ್ಯಕ್ತಿ ॥ ೫॥

ಚಿಟ್ಟಾಣಿ ಅಜ್ಜನಾದ ಎಂದವರೆಲ್ಲಾ
ಬಾಯಿಮುಚ್ಚಿ ಕುಳಿತಿದ್ದಾರೆ ಈಗ
ನಮ್ಮ ಹರಕೆಯಿದು, ಹಾರೈಕೆಯಿದು
"ಭಾರತರತ್ನವೂ ಬರಲಿ ಬಹುಬೇಗ" ॥ ೬॥

"ಚಿರಂಜೀವಿಯಾಗಲಿ ವರನಟ ಚಿಟ್ಟಾಣಿ"
ಚಿನ್ನವಾಗಲಿಯಕ್ಷಕಲಾವಿದನ ಬದುಕು
ಕುಣಿಕುಣಿದು ಮನ ತಣಿಸುತ್ತಲೇ ಇರಿ
ಒಟ್ಟಾಗಿ ಹಾಕುವೆವು ತಮಗೇ ಪರಾಕು ॥ ೭॥

**ಪ್ರಶಾಂತ ಮೂಡ್ಲಹೆಗಡೆಮನೆ**
**ಹೊನ್ನಾವರ**

*PAGE DONATED BY : **WELL WISHER OF HWT***

## ACHIEVEMENT



Kumari Soumya Bhat studying in M.E.S. Chaitanya P. U. College, Sirsi, who is grand daughter of Smt. Katyayani and late Shri Kuppa Bhat, daughter of Smt. Veena and Shri Ganesh Bhat at Chitrigi, Kumta stood FIRST in the Karnataka State level Science Seminar on the subject "Biological Warfare". The competition was conducted on January 9, 2012 at Chikkmangalore.

***We congratulate her.***

## DONATION

Donation of Rs. 1501/- from Smt. Anasuya and Shri T. P. Bhagwath, Naik on the happy occasion of the marriage of their daughter Geeta with Arun on 12.03.2012.

***We wish the couple a happy married life.***

## ಸ್ವರ್ಣವಲ್ಲಿ ಸೇವಾ ಸಮಿತಿ ಮುಂಬಯಿ

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳು ಸೋಂದಾ ಸ್ವರ್ಣವಲ್ಲಿ ಮಠ ಇವರ ವ್ಯಾಸಪೂಜಾ ಮತ್ತು ಚಾತುರ್ಮಾಸ ವ್ರತವನ್ನು ಜುಲೈ 3, 2012ರಂದು ಸ್ವರ್ಣವಲ್ಲಿ ಮಠದಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮದಲ್ಲಿ ಸರ್ವ ಶಿಷ್ಯವೃಂದವು ಪಾಲ್ಗೊಂಡು ಶ್ರೀಗಳ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ವಿನಂತಿ.

ಶ್ರೀಗಳ ಚಾತುರ್ಮಾಸಾವಧಿಯಲ್ಲಿ ಮುಂಬಯಿ ಸೀಮೆಯಿಂದ ನಡೆಯುವ ಭಿಕ್ಷಾ ಸೇವೆಯ ವಿವರಕ್ಕೆ ಕೆಳಗಿನವರನ್ನು ಸಂಪರ್ಕಿಸಬಹುದು.

R. G. Bhat : 9867300127 / 28542895
K. G. Hegde: 28671749 / 9869074115

## ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕದ ಅಧ್ಯಕ್ಷರಾಗಿ ಎಚ್.ಬಿ.ಎಲ್. ರಾವ್ ಮರು ಆಯ್ಕೆ

ಕ.ಸಾ.ಪ. ಮಹಾರಾಷ್ಟ್ರ ಘಟಕದ ಅಧ್ಯಕ್ಷರಾಗಿ ಎಚ್.ಬಿ.ಎಲ್.ರಾವ್ ಅವರು ತೃತೀಯ ಬಾರಿಗೆ ಅಧಿಕಾರ ವಹಿಸಿದ್ದಾರೆ. ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅವರು ಬಹುಮತದಿಂದ ಆರಿಸಲ್ಪಟ್ಟರು.

ನೂತನ ಉಪಾಧ್ಯಕ್ಷರಾಗಿ ಡಾ. ಜಿ. ಎನ್. ಉಪಾಧ್ಯ ಮತ್ತು ಎಂ. ಬಿ. ಕುಕ್ಯಾನ್, ಗೌ. ಪ್ರ. ಕಾರ್ಯದರ್ಶಿಯಾಗಿ ಡಾ| ಕರುಣಾಕರ ಎನ್. ಶೆಟ್ಟಿ, ಪಣಿಯೂರು, ಜೊತೆ ಕಾರ್ಯದರ್ಶಿಯಾಗಿ ಎಸ್. ಕೆ. ಸುಂದರ್, ಕೋಶಾಧಿಕಾರಿ ಪಿ. ಉಮೇಶ್ ರಾವ್ ಆಯ್ಕೆಯಾಗಿದ್ದಾರೆ. ಸಾಹಿತ್ಯ ವಿಭಾಗದ ಸಂಚಾಲಕರಾಗಿ ಎನ್. ಆರ್. ರಾವ್, ಮಹಿಳಾ ವಿಭಾಗದ ಸಂಚಾಲಕಿಯಾಗಿ ಅಮಿತಾ ಭಾಗ್ವತ್, ಸಾಂಸ್ಕೃತಿಕ ವಿಭಾಗದ ಸಂಚಾಲಕಿಯಾಗಿ ಸಹನಾ ಭಾರದ್ವಾಜ್ ಇವರನ್ನು ನೇಮಿಸಲಾಗಿದೆ.

ಸಮಿತಿಯ ಸದಸ್ಯರಾಗಿ ಟಿ. ಎಸ್. ಉಪಾಧ್ಯಾಯ, ಶ್ರೀನಿವಾಸ ಜೋಕಟ್ಟೆ, ಡಾ. ಮಮತಾ ರಾವ್, ಜಿ. ಪಿ. ಕುಸುಮ, ಜಿ. ಎಸ್. ನಾಯಕ್, ಎಚ್. ಎಸ್. ಪೂಜಾರಿ, ಅಶೋಕ್ ಸುವರ್ಣ, ಡಾ. ಗುರುಲಿಂಗಪ್ಪ ದಬಾಲೆ (ಅಕ್ಕಲಕೋಟೆ), ಡಾ. ರಮೇಶ್ ಮೂಲಗಿ (ಲಾತೂರ್), ಡಾ. ಬಿ. ಬಿ. ಪೂಜಾರಿ (ಸೊಲ್ಲಾಪುರ), ಇಂದಿರಾ ಸಾಲ್ಯಾನ್ (ಪುಣೆ) ಇವರು ಆಯ್ಕೆಯಾಗಿದ್ದಾರೆ.

## ಅಪ್ರತಿಮ ಕಲಾವಿದರಾದ ಜಿ. ಡಿ. ಭಟ್ ಕೆಕ್ಕಾರ್ 60 ತುಂಬಿದ ಸಂದರ್ಭದಲ್ಲಿ ವಿರಚಿತ ಚುಟುಕು

### ಮುತ್ತು

ಅಪ್ರತಿಮ ಕಲಾವಿದನೆ ನಿನಗೆ ಅರವತ್ತು
ಆದವನು ನೀನಲ್ಲ ಯಾರಿಗೂ ತೊತ್ತು
ನಿನ್ನ ಛಲ ನಿನ್ನ ಕಲೆ ಮಾತ್ರವೇ ಸೊತ್ತು
ಸಜ್ಜನರ ಮನಗೆದ್ದು ನೀನಾದೆ ಮುತ್ತು.

### ನಿನ್ನೊಳದ ಕಲಾವಿದ

ನಿನ್ನೊಳದ ಕಲಾವಿದ ಹೊರ ಹೊಮ್ಮಿ ಇಂದೆ
ಕರುನಾಡ ಪಸರಿಸುತ ಸಾಗಿಹನು ಮುಂದೆ
ಧನ್ಯನೋ ನೀಧನ್ಯ ಹಿರಿ ಕಲೆಯ ತಂದೆ
ಕಲೆಯ ಬೆಲೆ ಅರಿತವರ ಮನಗೆದ್ದು ಬಂದೆ.

### ಕಲೆಯ ಕಿಮ್ಮತ್ತು

ಅಳೆಯಲಾಗದು ನೋಡಿ ಕಲೆಯ ಕಿಮ್ಮತ್ತು
ಅಲ್ಲವೋ ಕಲಾವಿದ ಯಾರದೇ ತೊತ್ತು
ಬೆಲೆ ಕಟ್ಟವಾಗದಿಹ ಅಪೂರ್ವ ಸೊತ್ತು
ಅನ್ನುವುದು ಕೆಲವರಿಗೆ ಮಾತ್ರವೇ ಗೊತ್ತು.

### ಸರಿ ಸಾಟಿ?

ರಂಗ ಕಲೆ ಮೂರ್ತಿ ಕಲೆ ಚಿತ್ರ ಕಲೆ ಒಳಗೆ
ಇಲ್ಲಂತೂ ಸರಿ ಸಾಟಿ ಯಾರಿಲ್ಲ ನಿನಗೆ
ಪ್ರಚಾರ ಬಯಸದೇ ನೀ ಕುಳಿತು ಕೊಂಡೆ
ಗುರುತಿಸುವ ಮಾನವನು ಬಂದಾನೆ ಮುಂದೆ?

### ಕೆಕ್ಕಾರ್

ಕೆಕ್ಕಾರು ಎಂದೆಂಬ ಈಹಳ್ಳಿ ನೋಡು
ಆಗಿಹುದು ಈ ಹೊತ್ತು ಹಿರಿ ಕಲೆಯ ಬೀಡು
ಗೋಪಾಲ ಎಲ್ಲವೂ ಆ ನಿನ್ನ ಲೀಲೆ
ಪ್ರಜ್ವಲಿಸ ಹತ್ತಿತೋ ಈ ಪಳ್ಳಿ ಮೂಲೆ.

### ಸಾರ್ಥಕದ ಬಾಳು

ಸಾರ್ಥಕವು ಭೂಮಿಯಲಿ ಆ ನಿನ್ನ ಜನನ
ಓ ಜಿ.ಡಿ. ನಿನಗಿದೋ ಪಾಮರನ ನಮನ
ಕಲೆಯ ಆಧಾರಕಗೆ ನೀಡುತ್ತ ವರುಷ
ಸಾಧಕನೆ ನೀ ಬಾಳು ನೂರಾರು ವರುಷ.

### ಪ್ರಾರ್ಥನೆ

ಎಲ್ಲೆಲ್ಲೊ ಅಲೆದಲೆದು ಸವೆ ಸವೆಸಿ ದಾರಿ
ಕೊನೆಯ ನೆಲೆ ಕಂಡಿರುವೆ ಕಡ್ತೋಕ ಸೇರಿ
ಸ್ವೀಕರಿಸಿ ಬಾಂಧವರೆ ಈ ದೀನನನ್ನು
ಬಾಳನ್ನು ನೂಕುವೆನು ಹಾಕದೇ ಕನ್ನ.

### ಈಅಕ್ಷಿ

ಈ ಅಕ್ಷಿ ನಿನ್ನದೇ ಆದರೂ ಕೂಡ
ಎಂದಿಗೂ ಅಧಿಕಾರ ಚಲಾಯಿಸಬೇಡ
ನೇತ್ರಗಳ ಬಗೆಗಾಗಿ ಆ ನಿನ್ನ ಪಾತ್ರ
ನೇತ್ರವೈದ್ಯನ ಸಲಗೆ ಪಾಲನೆಗೆ ಮಾತ್ರ.

**ವಿಡಂಬಾರಿ**

*PAGE DONATED BY : **SHRI N. R. HEGDE, DOMBIVLI** (DEC.-2012)*

# SANITATION AND THE HEALTH SCENARIO
# THE REASON FOR POOR HEALTH IS AN OBVIOUS STINK

- Dr. Ishaprasad Bhagwat
Director (Program Operations)
WaterAid India Liaison Office

### 1.0 Introduction

Poor sanitation is an important reason behind many of our health problems; we can see the reason, and the smell is obvious.

Have a look at the global figures :

- 1.8 million people die every year from diarrhoeal diseases (including cholera); 90% are children under the age of 5 years; most are in developing nations
- 88% of diarrhoeal disease is attributed to unsafe water, inadequate sanitation and hygiene,
- 1.3 million people die of malaria each year; 90% are children under 5 years,
- 133 million people suffer from high intensity Intestinal Helminths infection, which often has consequences such as cognitive impairment, massive dysentery and anaemia,
- 20% of clinical cases of Japanese Encephalitis die, and 35% suffer from permanent brain damage, and
- There are 1.5 million cases of clinical Hepatitis A every year.

Diarrhoea is the leading cause of child deaths in South Asia. 20% of child mortality in India is a result of diarrhoea, which is an estimated 413, 400 in 2008.

What do we mean by poor sanitation? It is to do with open defecation; more than 50% of Indians continue to defecate in the open, often as a result of limited access to toilet. It is do with poor drainage systems, leading to stagnant cesspools; it is do with poor disposal of solid waste, especially of the biodegradable kind, for it leads to growth and multiplication of flies and other disease bearing organisms.

It is also to do with poor levels of personal hygiene. The habit of washing hands after defecation, before eating meals, and after disposal of a child's faeces is limited, and spreads disease.

### 2.0 Are all reasons for ill health associated with poor sanitation?

No, but a large majority of communicable illnesses are, like diarrhoea,

The simple reason is that excreta are not disposed off safely, and personal hygiene, especially hand washing, is inadequate.

To reiterate, more than 50% of Indians practice open defecation. This is a national average. But there is no state where the entire population uses toilets. There are districts in India where no one uses toilets.

(*Contined on Page12*)

UIL
UGRU INDUSTRIES

*With Best Compliments from*

UGRU INDUSTRIES
**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*



RNI NO. MAHBIL / 2000 / 746,
Postal R.NO. MH/MR/N/161/MBI/2012-2014

| Posted at Mumbai Patrika Channel Stg. Office Mumbai-400 001 | Date of Posting : 27, 28th of every previous month |
|---|---|

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

**To,**

(*Contined from Page11*)

Rural India has a problem with toilets; the situation in urban slums is far worse. Overcrowding in slums leads to a rapid spread of disease.

We are aware of the 5 F Model for spread of disease: human excreta can spread disease through Flies, Fields, Fluids, Fingers and Food.

The benefits of safe disposal of excreta and hand washing have been documented:

- ◆ Improved sanitation reduces diarrhoea by 32%
- ◆ Promotion of hand washing can reduce diarrhoea by 45%

There are other issues related to the practice of open defecation. It is a question of human dignity, and women are the obvious sufferers. Many women suffer from diseases like constipation and piles, as a result of holding back defecation during day.

An issue of personal hygiene now increasingly coming to light is the issue of menstrual hygiene. Because girls and women hesitate to change menstrual clothes in the open, hygiene suffers. This leads to considerable morbidity.

Technology is known, the funds are available.....what is needed is a change in human behaviour. Indians need to go to toilets, and practice hand washing.

**3.0 What are we, Government, and specifically the Health Sector, doing about this?**

The Government of India has a nationwide campaign, the Total Sanitation Campaign (TSC), for promotion of sanitation in rural areas. Programs like the Jawaharlal Nehru National Urban Renewal Mission (JNNURM) are focussed on urban areas. The Government Programs are receiving huge budgetary outlays. It is often not used entirely. But there has been an increase in the number of toilets being constructed. Awards like the Nirmal Gram Puraskar are on the rise across India.

What is interesting is that while more money is being spent to improve sanitation, a concomitant decrease in diarrhoeal disease is not obvious. A reason could be limited usage of the toilets constructed. Behaviour change obviously needs emphasis.

It is also interesting that the Health Sector has not been involved in these Government Programs. Doctors and nurses come into the picture only after disease strikes, and patients are to be treated.

Sanitation is taught to medical students, and prevention of disease is an important subject covered in medical school. But it is often lip service. Sanitation is covered under Social and Preventive Medicine (SPM), and the acronym is often spelt as Shit Pot Medicine by doctors!

Practitioners of water and sanitation are guilty of not bringing in the medical fraternity to also address issues of poor sanitation; doctors are also guilty of not doing enough to prevent disease and promote health.

Sanitation is aptly called "Beyond Construction" . Presently, only engineers deal with this sector. We need more disciplines to start studying the issue, and plan a coordinated action.

**4.0 What is needed to be done?**

A number of quotes on the importance of sanitation exist in the health and development sector. A recent one by Lee Jong-Wook, Director General of WHO, is "Safe Water and Improved Sanitation is one of the primary drivers of public health. If we can secure access to clean water and sanitation, a huge battle against all kinds of diseases will be won."

Globally, it is known that sanitation is fundamental to all Millennium Development Goals, and is needed to deliver broad based development outcomes.

Even doctors have admitted that sanitation is important to prevent disease. A British Medical Journal poll in 2006 showed that doctors believe sanitation to be most important medical science progress in the last 200 years, more important than vaccines and antibiotics.

**What is needed is :**

a. Sanitation should become a people's movement, a matter of national pride. A nation which can send satellites to the moon needs to reflect and act on the issue of open defecation,

b. Women should be at the forefront of a nationwide campaign to help improve sanitation,

c. We need a number of disciplines, including managers, doctors and social scientists to study the issue and plan a coordinated action. Doctors can do simple things like promote hand washing at critical times, and

d. The Government Program is ambitious, and has adequate funding. Civil Society can support it, and help the Government to utilize the funding. ●

*PAGE DONATED BY : **SHRI VIVEK BHAGWAT,** MULUND (DEC.-2010)*